Sri Dharm Singh : The case is registered under section 342. You don't worry. The matter is entrusted to C.O.L. We will take action. We are not going to hesitare.

ಶ್ರೀ ಸಿ. ಬೈರೇಗೌಡ : ತಾವುಗಳು ಸಿಓಡಿ ತನಿಖೆಗೆ ಆಜ್ಞೆ ಮಾಡಿದ್ದೀರಿ, ಅದು ಆಗಲಿ. ಆದರೆ ಸೆಕ್ಷನ್ 302ರ ಪ್ರಕಾರ ತಾವುಗಳು ಕೇಸನ್ನು ಖತಕ್ಕಾಗಿ ರಿಜಿಸ್ಟರ್ಡ್ ಮಾಡಿಸಿಲ್ಲ?

ಶ್ರೀ ಧರ್ಮಸಿಂಗ್ : ಸಿಓಡಿ ಎಸ್‌ಕ್ವಾಯರಿ ವರದಿಯು ಬಂದಮೇಲೆ ಯಾರ್ಯಾರು ಇದರಲ್ಲಿ ಒಳಗಾಗಿದ್ದಾರೆ, ಅಷ್ಟೂ ಮಂದಿಯ ಮೇಲೆ ಕ್ರಮ ಜರುಗಿಸುತ್ತೇವೆ. ಮೊದಲು ವಿಚಾರಣಾ ವರದಿಯು ಬರಲಿ, ಆಮೇಲೆ ನೋಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷೆಣಿಯವರೇ, ವಾರ್ತಾ ಮತ್ತು ಪ್ರಚಾರ ಇಲಾಖಾ ಮಂತ್ರಿಯವರು ಸದನಕ್ಕೆ ಬಂದಿದ್ದಾರೆ. ಅವರನ್ನು ಕರೆ ಕಳುಹಿಸಿದ್ದರು. ಅದರ ಬಗ್ಗೆ ತಾವು ಹೇಳಿದ ಲೋಕಸೇವಾ ಆಯೋಗದ ವಿಚಾರವನ್ನು ಎತ್ತಿಕೊಳ್ಳಬಹುದು.

ಉಪಾಧ್ಯಕ್ಷೆಣಿಯವರು : ಈಗ ಲೋಕಸೇವಾ ಆಯೋಗದ ವಿಚಾರ ಪ್ರಸ್ತಾಪ ಮಾಡಿ. ಮಾನ್ಯ ಮುಖ್ಯಮಂತ್ರಿಯವರು.

ವಿಷಯ : ಹೈಸ್ಕೂಲ್ ಉಪಾಧ್ಯಾಯರ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ ಭರ್ತಿ ಮಾಡುವುದನ್ನು ವಾಪಸ್ಸು ತೆಗೆದುಕೊಂಡಿರುವ ಬಗ್ಗೆ :

+ ಶ್ರೀ ಎಸ್. ಬಂಗಾರಪ್ಪ : ಮಾನ್ಯ ಉಪಾಧ್ಯಕ್ಷೆಣಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಯಡಿಯೂರಪ್ಪನವರು ಹಾಗೂ ಮತ್ತಿತರು ಲೋಕಸೇವಾ ಆಯೋಗದವರು ಹೈಸ್ಕೂಲ್ ಮುಖ್ಯ ಉಪಾಧ್ಯಾಯರುಗಳ ಹುದ್ದೆಯನ್ನು ಭರ್ತಿ ಮಾಡತಕ್ಕಂಥ ವಿಚಾರದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಲೋಕಸೇವಾ ಆಯೋಗದವರು ಸದರಿ ಹುದ್ದೆಗಳಿಗೆ ಸಂದರ್ಶನವನ್ನು ನಡೆಸುತ್ತಿರತಕ್ಕಂಥಾದ್ದರ ಮಧ್ಯೆ ಸರಕಾರದವರು ನಿಲ್ಲಿಸಿದ್ದಾರೆ. ಮಾನ್ಯ ವಾರ್ತಾ ಸಚಿವರು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಲಂಚಗುಳಿತನ ಅಥವಾ ಭ್ರಷ್ಟಾಚಾರದ ಆಪಾದನೆಗಳು ಬಂದಿರುವುದರಿಂದ ಈ ವಿಚಾರಕ್ಕೆ ತಡೆ ನೀಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ ಎಂದು ನನಗೆ ಗೊತ್ತಾಯಿತು ಕ್ಷಮಿಸಬೇಕು, ಆ ಸಂದರ್ಭದಲ್ಲಿ ನಾನು ಹೊರಗೆ ಇದ್ದೆ. ಮೊದಲು ಎರಡು ವಿಚಾರಗಳನ್ನು ನಾವು ಇದರಲ್ಲಿ ಗಮನಿಸಬೇಕು. ಇದರಲ್ಲಿ ವಾಸ್ತವಾಂಶ, ಸರಕಾರಕ್ಕೆ ಅಧಿಕಾರ ಎಷ್ಟಿದೆ ಎನ್ನತಕ್ಕಂಥಾ ವಿಚಾರ. ಬರೀ ಅದರ ಮೇಲೆ ನಾನು ನಿಂತು ಮಾತನಾಡುತ್ತಿದ್ದೇನೆ ಎಂದು ಯಾರೂ ಭಾವಿಸಬೇಕಾಗಿಲ್ಲ. ಆದರೆ ಒಂದು ವಿಚಾರವನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಲೋಕಸೇವಾ ಆಯೋಗದ ಬಗ್ಗೆ ನಮಗೆ ಅಪಾರ ಗೌರವವಿದೆ, ಗೌರವವಿಲ್ಲವೆಂದು ನಾನು ಹೇಳುವುದಿಲ್ಲ Afterall, it is a statutory body, constitutionally created body. We have got all respects. ಆದರೆ ಎಷ್ಟೋ ಸಾರಿ ತಮ್ಮ ಸರಕಾರ ಇದ್ದಾಗಲೂ, ನಮ್ಮ ಸರಕಾರ ಇದ್ದಾಗಲೂ ಕೂಡ ಇಂಥ ಸಂದರ್ಭಗಳಲ್ಲಿ ನಾವು ಕೊಟ್ಟಿರತಕ್ಕಂಥ ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಂಡಿರತಕ್ಕಂಥ ನಿದರ್ಶನಗಳು ಇವೆ. ಆದರೆ ಸಂದರ್ಶನ ನಡೆಯುತ್ತಿರತಕ್ಕಂಥದ್ದರ ಮಧ್ಯೆದಲ್ಲಿ ನೀವು ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಂಡಿದ್ದೀರಿ ಎಂದು ಹೇಳಬಹುದು. ಎಷ್ಟೋ ಸಾರಿ ಸಂದರ್ಶನವಾದ ನಂತರ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯು ಸರಕಾರಕ್ಕೆ ಬಂದಾಗಲೂ ಕೂಡ ಅದನ್ನು ಸರಕಾರದವರು ಒಪ್ಪಬಹುದು, ಅಥವಾ ಬಿಡಬಹುದು, ಅದು ಸರಕಾರಕ್ಕೆ ಬಿಟ್ಟಿರತಕ್ಕಂಥ ವಿಚಾರ. ಅದು ಸರಕಾರದ ಅಧಿಕಾರದ ವ್ಯಾಪ್ತಿಗೆ ಬರತಕ್ಕಂಥ ವಿಚಾರವಾಗಿದೆ. ನಾವು ಇಲ್ಲಿ ಸಾವಿರಾರು ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ವಿಚಾರವಿದೆ. ಇವೊತ್ತು ನಾವು ರಿಜಿಸ್ಟ್ರೇಷನ್ ಕಟ್ಟಗಡಿ, ಮತ್ತೊಂದರ ಬಗ್ಗೆ ನಡೆದಿರತಕ್ಕಂಥದ್ದರ ಬಗ್ಗೆ ವಿಚಾರ ಮಾಡಿದರೂ ಕೂಡ ಸಂದರ್ಶನವು ರಾಜ್ಯದ ಹಲವಾರು ಕಡೆಗಳಲ್ಲಿ ನಡೆದಿರತಕ್ಕಂಥ ಸಂದರ್ಭದಲ್ಲಿ ಸರಕಾರಕ್ಕೆ ಕೆಲವಾರು ವಿಚಾರಗಳು

+ ಈ ಚೆಪ್ಪೆ ಮಾನ್ಯ ಸದಸ್ಯರು / ಮುಖ್ಯಮಂತ್ರಿಗಳು / ಮಂತ್ರಿಗಳು ತಮ್ಮ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೇಳಿ ಬಂದ ಮೇಲೆ, ಅವರಿಂದ ಪಟ್ಟಿಯು ಬಂದ ಮೇಲೆ ಅದನ್ನು ಒಪ್ಪುವುದು ಬಿಡುವುದನ್ನು ನಿರ್ಧರಿಸುತ್ತೇವೆ. ಹೀಗೆ ಕೆಲವು ಸಾರಿ ಸಂದರ್ಶನ ನಡೆದ ಮೇಲೆ ಅಂದರೆ ಯಾರು ಅಭ್ಯರ್ಥಿಗಳು ಸಂದರ್ಶನಕ್ಕೆ ಅಲ್ಲಿಗೆ ಹೋಗುತ್ತಾರೆ ಅವರು ಹಣವನ್ನು ಖರ್ಚು ಮಾಡಿ ಮುಗಿದ ಮೇಲೆ ನಾವು ಕೆಲವೊಮ್ಮೆ ಪಟ್ಟಿಯನ್ನು ಅಂತಿಮವಾಗಿ ಕಳುಹಿಸಿದ್ದನ್ನು ತಿರಸ್ಕಾರ ಮಾಡಿದ್ದು ಕೂಡ ಉಂಟು. ಆದರೆ ಈ ಸಂದರ್ಭದಲ್ಲಿ ಇದರ ಅರ್ಥ ಏನಾಗುತ್ತದೆ, ಯಾರು ಹಣವನ್ನು ಖರ್ಚು ಮಾಡಿ ಅಭ್ಯರ್ಥಿಗಳಾಗಿ ಸಂದರ್ಶನಕ್ಕೆ ಹೋಗಿರುತ್ತಾರೋ ಅವರಿಗೆ ತೊಂದರೆಯಾಗುತ್ತದೆ. ಅದಕ್ಕಿಂತ ಮೊದಲು ಸರಕಾರಕ್ಕೆ ಕೆಲವು ವಿಚಾರಗಳ ಆಧಾರದ ಮೇಲೆ ನಾವು ಇನ್ನೂ ಶೀಘ್ರವಾಗಿ ನೇಮಕಾತಿಯನ್ನು ಮಾಡಿಕೊಳ್ಳಬೇಕು, ಇದು ಈ ರೀತಿಯಾಗಿ ನಿಧಾನವಾಗಿ ಮಾಡತಕ್ಕಂಥಾದ್ದು ಸರಿಯಾಗಲಾರದು, ನಾವು ಇಲಾಖಾ ನೇಮಕಾತಿ ಸಮಿತಿಗಳ ಮೂಲಕ ಅದನ್ನು ಮಾಡಿಕೊಳ್ಳಬಹುದು ಎಂಬ ತೀರ್ಮಾನವನ್ನು ಮಾಡಿಕೊಳ್ಳುವ ಹಾಗಿದ್ದರೆ ಅದರಲ್ಲಿ ನ್ಯಾಯ ಇನ್ನೂ ಜಾಸ್ತಿ ಸಿಗಬಹುದು ಎಂಬ ಒಂದು ಅಭಿಪ್ರಾಯವೂ ಇದೆ. ಇದು ತಮ್ಮ ಕಾಲದಲ್ಲಿಯೂ ಕೂಡ ಇತ್ತು. ತಮ್ಮ ಕಾಲದಲ್ಲಿ 34 ಇಲಾಖಾ ನೇಮಕಾತಿ ಸಮಿತಿಗಳು ಇದ್ದುವು ಎಂದು ಕಾಣುತ್ತದೆ. ಇದು ತಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರವೇ ಆಗಿದೆ. ಆದ್ದರಿಂದ ಹಾಗೆ ಮಾಡಿದರೆ ಒಳ್ಳೆಯದು ಎಂಬ ವಿಚಾರ. ಎಷ್ಟೋ ಸಾರಿ ನಮ್ಮ ಕಡೆಯಿಂದ, ನಿಮ್ಮ ಕಡೆಯಿಂದ, ಮಾನ್ಯ ಮಿತ್ರರು ನನ್ನ ಹತ್ತಿರ ಬಂದು ಹೇಳಿದ್ದಾರೆ. ನಾವು ಲೋಕಸೇವಾ ಆಯೋಗದ ಬಗ್ಗೆ ಅಪಾರ ಗೌರವವನ್ನು ಇಟ್ಟುಕೊಂಡರೂ ಕೂಡ ಯಾವ ಒಬ್ಬ ಅಭ್ಯರ್ಥಿ ಬಂದರೂ ಕೂಡ ಅವರನ್ನು ಸೆಲೆಕ್ಟ್ ಮಾಡಲು ಆಗುವುದಿಲ್ಲ, ಎಂದು ಹೇಳತಕ್ಕಂಥಾದ್ದು ಇದೆ. ಇದು ಅವರು ನೊಂದ ಮನಸ್ಸಿನಿಂದ ಹೇಳಿರತಕ್ಕಂಥಾದ್ದು. ರಿಸರ್ವೇಷನ್ ಕೆಟಗರಿ ಮೈಂಟೇನ್ ಮಾಡತಕ್ಕಂಥ ಒಂದು ವಿಚಾರ ಬಂದರೂ ಕೂಡ ಇದೇ ಪ್ರಶ್ನೆ ಬರುತ್ತದೆ. ನಮ್ಮ ಹತ್ತಿರ ಅಭ್ಯರ್ಥಿಗಳು ಬರುತ್ತಾರೆ. ಅವರಿಗೆ ನಾವು ಇಲ್ಲಿ ರಿಕ್ರೂಟ್‌ಮೆಂಟ್ ಕಮಿಟಿಯವರಿಗೆ ಹೇಳಬಹುದು, ಆದರೆ ಲೋಕಸೇವಾ ಆಯೋಗದವರಿಗೆ ಹೇಳುವುದಕ್ಕೆ ಬರುವುದಿಲ್ಲ ಎಂಬ ವಿಚಾರವನ್ನು ಎಲ್ಲಾ ಕಡೆಯವರು ಬಹುಶಃ ಒಪ್ಪುತ್ತಾರೆ. Sri Qumarul Islam : We never get one percent and not even 0.5%.

Sri S. Bangarappa : That is the point. That is the whole trouble. PSC Member ಮೇಲೆ ಹೀಗೆ ಬಂದಿರತಕ್ಕಂಥ ವಿಚಾರ ಕೂಡ ಇರತಕ್ಕಂಥಾದ್ದು ತಮಗೆಲ್ಲರಿಗೂ ಕೂಡ ಗೊತ್ತಿದೆ. ಇದು ನಮ್ಮ ಗಮನಕ್ಕೆ ಬಂದಮೇಲೆ, ನಿಜ, ಮಾನ್ಯ ಶಿವಮೂರ್ತಿಯವರು ಏನು ಹೇಳಿದ್ದಾರೆ? ಲಂಚಗುಳಿತನದ ಆಪಾದನೆಯ ಬಗ್ಗೆ ಹೇಳಿದ್ದಾರೆಂದು ಕಾಣುತ್ತದೆ. ಇಂಥ ಆಪಾದನೆಯು ಪಿಎಸ್‌ಸಿ ಮೆಂಬರ್ಸ್ ಮೇಲೆ ಕೇಳಿಬರುತ್ತಿರುವುದು ಹಿಂದಿನಿಂದಲೂ ಇದ್ದೇ ಇದೆ. ಆ ಕಡೆ ಖಳಿತವರು, ಈ ಕಡೆ ಖಳಿತವರು ಮೊದಲಾಗಿ ಎಲ್ಲರೂ ಇಂಥ ಆಪಾದನೆಗಳನ್ನು ಮಾಡಿಕೊಂಡು ಬಂದಿದ್ದಾರೆ. ವಿಧಾನಪರಿಷತ್ತಿನಲ್ಲಿ ಕಳೆದ ಸಾರಿ ಲೋಕಸೇವಾ ಆಯೋಗದವರು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಪೋಸ್ಟ್‌ಗೆ ಮಾಡಿದ ಭರ್ತಿಯ ವಿಚಾರದಲ್ಲಿ ಸಾಕಷ್ಟು ವಿಚಾರಗಳು ಪ್ರಸ್ತಾಪವಾಗಿತ್ತು. ಅದರಲ್ಲಿ ರಿಸರ್ವೇಷನ್ ಕೆಟಗರಿ ಇದ್ದರೂ ಕೂಡ ಅಂಥ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಿದ್ದರು ಎಂಬ ಮಾತು ಕೇಳಿಬಂತು; ಆಮೇಲೆ ಅದರ ಬಗ್ಗೆ ಒಂದು ತೀರ್ಮಾನ ಮಾಡಬೇಕಾಗಿ ಬಂತು ಎಂಬ ವಿಚಾರವು ತಮಗೆಲ್ಲರಿಗೂ ಗೊತ್ತಿದೆ. ಹೀಗೆ ನಾವು ಸಂದರ್ಶನ ಇತ್ಯಾದಿ ಎಲ್ಲಾ ಮುಗಿದ ಮೇಲೆ, ಅಭ್ಯರ್ಥಿಗಳು ಹಣ ಖರ್ಚು ಮಾಡಿ ಎಲ್ಲಾ ಮುಗಿದ ಮೇಲೆ ನಿಲ್ಲಿಸುವುದಕ್ಕಿಂತ ಮೊದಲೇ ನಮಗೆ ವಿಚಾರಗಳು ಗೊತ್ತಾದ ತಕ್ಷಣ ನ್ಯಾಯವು ಯಾರಿಗೆ ಸಮಾಜದಲ್ಲಿ ಸಿಕ್ಕಿಲ್ಲ, ಅವರಿಗೆ ನ್ಯಾಯವನ್ನು ಒದಗಿಸಿಕೊಡಬೇಕೆಂಬ ಇಚ್ಛೆ ನಮ್ಮ ಮನಸ್ಸಿನಲ್ಲಿದ್ದರೆ ಮೊದಲು ತಕ್ಷಣ ಒಂದು ತೀರ್ಮಾನ ಮಾಡುವುದರಲ್ಲಿ ಬಹಳ ಅರ್ಥವು ಅಡಗಿದೆ ಎಂಬ ಅಂಶ ಮೂಲಾಧಾರವಾಗಿದೆ. ಇದನ್ನು ಬಿಟ್ಟು ನಮ್ಮ ಮನಸ್ಸಿನಲ್ಲಿ ಬೇರೆ ಏನೇನೂ ಇಲ್ಲ. What the difference it makes I cannot understand this difference versions. It the list is sent for approval of the

Government by the Public Service Commission, the other stage is the process of the selection of the candidates. ಇದನ್ನು ಬಿಟ್ಟರೆ ಬೇರೆ ಯಾವ ವಿಚಾರವೂ ಇಲ್ಲ ಎಂಬ ಅಂಶವನ್ನು ಹೇಳಬಯಸುತ್ತೇನೆ. ಆದರೆ ಇಲ್ಲಿರತಕ್ಕಂಥ ವಿಚಾರ ಹಣವನ್ನು ಖರ್ಚು ಮಾಡಿ ನ್ಯಾಯ ಸಿಕ್ಕಿಲ್ಲ ಎಂಬ ಮಾತನ್ನು ಅವರು ಕೇಳುವ ಬದಲು ನ್ಯಾಯ ಸಿಗುವ ರೀತಿಗೆ ನಾವು ಮಾಡಬೇಕು. ಒಂದು ವೇಳೆ ನೇಮಕಾತಿ ಸಮಿತಿಗಳಲ್ಲಿ ಅನ್ಯಾಯ ಆಗುವುದಿಲ್ಲವೇ ಎಂದು ಯಾರಾದರೂ ಕೇಳಬಹುದು.

ಆದರೆ ಒಂದೇ ವಿಚಾರ, ಬಹಳ ಜನಗಳ ಅಭಿಪ್ರಾಯ ಇದೆ. ಅದಕ್ಕೆ ಕಾರಣ ನಮಗೂ ನಿಮಗೂ ಗೊತ್ತಿದೆ. ಇಲಾಖಾ ನೇಮಕಾತಿ ಸಮಿತಿಯಲ್ಲಿ ಹೇಳಿ ಕೇಳಿ ಮಾಡಿಸಬಹುದು, ಅಲ್ಲಿ ನಮ್ಮ ಕಡೆಯವರು ಇರುತ್ತಾರೆ ನಿಮ್ಮ ಕಡೆಯವರು ಇರುತ್ತಾರೆ, ಆದರೆ ಅಲ್ಲಿ ಹೇಳೋದಿಕ್ಕೇ ಬರುವ ಹಾಗೆ ಇಲ್ಲ ಎಂಬುದು ಒಂದು ಅಭಿಪ್ರಾಯ ಈ ಹಿನ್ನೆಲೆಯಲ್ಲಿ ಬಂದಿರುವ ವಿಚಾರ, ಈ ದೃಷ್ಟಿಯಿಂದ ನಾವು ವಿಚಾರ ಮಾಡಿ ಜೊತೆಗೆ ಶೀಘ್ರವಾಗಿ ಇಲಾಖಾ ನೇಮಕ ಸಮಿತಿಗಳನ್ನ ಮಾಡಿ ಪೋಸ್ಟ್‌ಗಳನ್ನು ಫೆಲಪ್ ಮಾಡಬೇಕೆಂಬ ಉದ್ದೇಶದಿಂದಲೇ ಈ ತೀರ್ಮಾನ ಮಾಡಿದ್ದೇವೆ. ಲಂಚಗುಳಿತನ ಆಪಾದನೆ ಒಂದೇ ಅಲ್ಲ, ಅದರ ಬಗ್ಗೆಯೂ ಕೂಡ ಕಂಪ್ಲೇಂಟ್‌ಗಳೂ ನಮ್ಮ ಹತ್ತಿರ ಬಂದಿರುತ್ತವೆ, ಈ That is aalso one of the factors. But, not that point alone which is considered by the Government as the long ground on which we have taken the decision. This is for your kind information. ಈ ದೃಷ್ಟಿ ಇರೋದ್ರಿಂದ ತಾವು ಒಪ್ತೀರಿ ಅಂತ ನನ್ನ ಭಾವನೆ. ಲೋಕಸೇವಾ ಆಯೋಗದ ಬಗ್ಗೆ ನನಗೆ ಗೌರವ ಇದೆ. ತಾವಿದ್ದಾಗಲೂ ಎಷ್ಟೋ ಸಾರಿ ಅವರಿಗೆ ಅಧಿಕಾರ ಕೊಟ್ಟಿದ್ದನ್ನು ಹಿಂದಕ್ಕೆ ತೆಗೆಂಡಿದ್ದೀರಿ, ಲಿಸ್ಟ್ ಬಂದದ್ದನ್ನು ರಿಜೆಕ್ಟ್ ಮಾಡಿದ್ದೀರಿ, ನಾವೂ ಕೂಡ ನಿಮ್ಮ ಹಾಗೆ ಮಾಡಿದ್ದೇವೆ ಸ್ವಾಮಿ, ಹೊಸದಾಗಿ ಏನೂ ಮಾಡಿಲ್ಲ, having done is the larger interest of the public. ಆ ಅಭ್ಯರ್ಥಿಗಳು ಏನಿರ್ತಾರೆ ಅವರು ಹೋಗಿ ಅಲ್ಲಿ ಸೆಲೆಕ್ಷನ್ ಆಗಬೇಕು, ಅವರಿಗೊಂದು ಅವಕಾಶ ಸಿಗಬೇಕು. ಸದಸ್ಯರು ನಾವಿರಬಹುದು, ನೀವಿರಬಹುದು ಪಬ್ಲಿಕೇ ಇರಬಹುದು, ಅವರಿಗೊಂದು ಅವಕಾಶ ಸಿಗಲಿ ಎಂಬುದು ಬಿಟ್ಟುಬಿಟ್ಟರೆ ಮತ್ತೆ ಇದರಲ್ಲಿ ಬೇರೆ ತೊಡಕಂತೂ ಏನೂ ಇಲ್ಲ, ಆಡಳಿತಾತ್ಮಕ ದೃಷ್ಟಿಯಿಂದ ನಾವು ವಿಚಾರ ಮಾಡಿದರೆ ತ್ವರಿತ ಗತಿಯಿಂದ ನ್ಯಾಯ ತಕ್ಷಣ ಸಿಗಬೇಕು, ಸೆಲಕ್ಷನ್ ಆಗಬೇಕೆಂಬ ದೃಷ್ಟಿಯಿಂದಲೇ ನಾವು ಈ ರೀತಿ ಮಾಡಿರೋದು. Even that interview process which is going on will also take a long time, for your kind information. ನಾವು ಒಂದೇ ಒಂದು ತೀರ್ಮಾನ ಮಾಡಿರೋದನ್ನು ತಾವು ಒಪ್ತೀರಿ ಅಂತ ನಾನು ಭಾವಿಸಿದ್ದೇನೆ. ನಾಳೆ ಮಕ್ಕಳು ನಿಮ್ಮ ಹತ್ತಿರ ನಮ್ಮ ಹತ್ತಿರ ಬಂದವರಿಗೆ ಅವಕಾಶ ಸಿಗುತ್ತದೆಂಬ ದೃಷ್ಟಿಯನ್ನು ಇಟ್ಟುಕೊಂಡು ನಾವು ವಿಚಾರ ಮಾಡಿದ್ದೇವೆ. ಮತ್ತು ರಿಸರ್ವೇಷನ್ ಕೆಟಗಿರಿ ಇಟ್ಟುಕೊಂಡೇ ನಾವು ವಿಚಾರ ಮಾಡಿರೋದು. ಅದು ಬಿಟು ನಾವ್ಯಾರೂ ಹೋಗುವುದಿಲ್ಲ. ಇದು ಬಿಟ್ಟು ಮಾನ್ಯ ಶಿವಮೂರ್ತಿ ಹೇಳಿದ ಹಾಗೆ ಇದರಲ್ಲಿ ಬೇರೆ ವಿಶೇಷ ಏನೂ ಇಲ್ಲ. that is not the only ground on which we have taken the decision. There are other grounds also as I said. Hope the Hon'ble leader of the Opposition and Hon'ble Leader of the BJP group and all other members will agree to this.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಲುವಳಿ ಸೂಚನೆ ಪ್ರಸ್ತಾಪ ಮಾಡಿರುವವನು ನಾನು, ಆದ್ದರಿಂದ ನನಗೆ ಅವಕಾಶ ಕೊಡಿ.

ಉಪಾಧ್ಯಕ್ಷೆಣಿಯವರು : ನಿಮ್ಮ ಲೀಡರೇ ಮಾತನಾಡುತ್ತಿರುವುದು. ಆದ್ದುದರಿಂದ ಅವರಿಗೆ ಮೊದಲು ಅವಕಾಶ ಅವರು ಮೊದಲು ನಿಂತರು. ಅವರು ಮಾತನಾಡಿದ ಮೇಲೆ ನಿಮ್ಮನ್ನು ಕರೆಯುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ದಯಮಾಡಿ ತಾವು ದಾಖಲೆಗಳನ್ನು ನೋಡಿ ಸರ್ಕಾರಕ್ಕೆ ಯಾವ ಹಂತದಲ್ಲಿ ಬೇಕಾದರೂ ವಿಥ್‌ಡ್ರಾ ಮಾಡಲು ಇರುವ ಅಧಿಕಾರವನ್ನು ನಾನು ಪ್ರಶ್ನೆ ಮಾಡಲಿಲ್ಲ ಅದು ಸರ್ಕಾರಕ್ಕೆ ಬಿಟ್ಟ ವಿಚಾರ. ಆದರೆ ವಿಥ್‌ಡ್ರಾ ಮಾಡಲು ನೀವು ಕೊಟ್ಟ ಕಾರಣ ಏನು? ಭ್ರಷ್ಟಾಚಾರದ ಆಪಾದನೆ. ಅದನ್ನು ಪ್ರಶ್ನೆ ಮಾಡಿದ್ದೇನೆ. ಈಗ ನೀವು ಕೆಲವು ವಿಚಾರ ಹೇಳಿದ್ದೀರಿ. ಹಣ ಖರ್ಚು ಮಾಡಿದ ಮೇಲೆ ಅಂದರೆ ಏನು ಅದರ ಅರ್ಥ?

ಶ್ರೀ ಎಸ್. ಬಂಗಾರಪ್ಪ : ಹಣ ಖರ್ಚು ಮಾಡಿದ್ದು ಎಂದರೆ ನೀವು ಬೇರೆ ಅರ್ಥ ಹೇಳುತ್ತಿದ್ದೀರಿ. ನಾನು ಹೇಳಿದ್ದು ಇಂಟರ್‌ವ್ಯೂಗಾಗಿ ಟ್ರಾವೆಲ್ ಮಾಡೋದು ಬರೋದು ಇವೆಲ್ಲಾ ಕೂಡ, ಬೇರೆ ಯಾವುದೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ವ್ಯಾಖ್ಯಾನ ಚೆನ್ನಾಗಿ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ : ರಾಜ್ಯದ ಮುಖ್ಯಮಂತ್ರಿಗಳು ನೀವು ನಿಮ್ಮ ಬಾಯಿಂದ ಬರುವ ಒಂದೊಂದು ಶಬ್ದವನ್ನು ಈ ರಾಜ್ಯದ ಜನ ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಾರೆ. ನೀವು ಬಳಸಿರುವ ಭಾಷೆ ಹೇಳುತ್ತೇನೆ. ಬೇರೆ ಕಡೆ ನ್ಯಾಯ ಜಾಸ್ತಿ ಸಿಗುತ್ತದೆ ಅಂದರೆ ಈಗ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಅನ್ಯಾಯ ನಡೀತಿದೆ ಅಂತ ಪೂರ್ಣವಾದ ವಿಶ್ವಾಸ ನಿಮಗೆ ಬಂದಿದೆ ಅಂತ ಆಯ್ತು. That is a Cabinet decision. ಲಂಚಗುಳಿತನದ ಆಪಾದನೆಯೂ ಇದೆಯೆಂದು ಹೇಳಿದ್ದೀರಿ, ತ್ವರಿತಗತಿಯಿಂದ ಆಯ್ಕೆಯಾಗಬೇಕು ಎಂದು ಹೇಳಿದ್ದೀರಿ. ಇದುವರೆಗೂ ಶೇಕಡ 50ಕ್ಕಿಂತ ಹೆಚ್ಚು ಇಂಟರ್‌ವ್ಯೂ ಮುಗಿದುಹೋಗಿದೆ. ಮೈಸೂರು, ಬೆಳಗಾಂನಲ್ಲಿ ಮುಗಿದಿದೆ, ಗುಲ್ಬರ್ಗಾದಲ್ಲಿ ಇಂಟರ್‌ವ್ಯೂ ನಡೆಯುತ್ತಿತ್ತು ಬೆಂಗಳೂರಿನಲ್ಲೂ ಹೆಚ್ಚು ಕಡಿಮೆ ಮುಗಿದಿದೆ. ಹೆಚ್ಚೂ ಕಡಿಮೆ ಶೇಕಡಾ 50ರಿಂದ 60ರಷ್ಟು ಇಂಟರ್‌ವ್ಯೂ ಮುಗಿದ ಮೇಲೆ ನಿಮಗೆ ಲಂಚಗುಳಿತನದ ಆಪಾದನೆ ಕೇಳಿ ಬಂತು ಎಂದರೆ, ಅದಕ್ಕೆ ಆಧಾರಗಳೇನು? We are entitled to know and such members shall not continue in this High Office. It is a reflection cast on the Hon'ble Members of the Public Service Commission which is constituted under Article 17 of the Constitution. ಈ ರೀತಿ ಅವಮಾನ ಮಾಡುವುದಕ್ಕಿಂತ ನೀವು ಏನೇ ಕಾರಣವನ್ನು ಕೊಡಿ. ಭ್ರಷ್ಟಾಚಾರದ ಕಾರಣವನ್ನು ಕೊಟ್ಟು ವಿಥ್‌ಡ್ರಾ ಮಾಡುವಾಗ ಈ ಸದನಕ್ಕೆ ಸಂಪೂರ್ಣವಾಗಿ ನೀವು ಅದು ಏನಿತ್ತು ಎಂದು ಹೇಳಿ ಮಾಹಿತಿಯನ್ನು ಒದಗಿಸಬೇಕು. ಅಂಥ ಸದಸ್ಯರುಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಶಾಸನಬದ್ಧವಾದಂಥ ನ್ಯಾಯಾಂಗಕ್ಕೆ ಬೇಕಾದಂಥ ಮಾಹಿತಿಯನ್ನು ಕಳುಹಿಸಿ ಆಮೇಲೆ ತನಿಖೆಯನ್ನು ಮಾಡಿಸಿ ಅದರ ಮೇಲೆ ನೀವು ಕ್ರಮವನ್ನು ತೆಗೆದುಕೊಳ್ಳಿ. ಹೀಗೆ ಬಿಡುವುದರಿಂದ ಒಂದು ಸ್ವಾಯತ್ತ ಸಂಸ್ಥೆ ಏನಿದೆ, ರಾಜ್ಯಾಂಗದತ್ತವಾದ ಆ ಸ್ವಾಯತ್ತ ಸಂಸ್ಥೆಗೆ ಒಂದು ರಾಜ್ಯ ಸರ್ಕಾರ ಅವಮಾನ ಮಾಡಿದಂತಾಗಲಿಲ್ಲವೇ? ಹೀಗೆ ಅವಮಾನ ಮಾಡತಕ್ಕಂಥದ್ದು ಸರಿಯೇ? ಉಳಿದ ಯಾವುದೇ ಕಾರಣಗಳು, ನಿಯಮಗಳು ಇರಲಿ. ಹೀಗೆ ಅವಮಾನ ಮಾಡುತ್ತಾ ಹೋದರೆ ಒಂದೊಂದು ಸಂಸ್ಥೆಗಳನ್ನು ನಾವು ಜನತಂತ್ರದಲ್ಲಿರತಕ್ಕಂಥ ಸಂಸ್ಥೆಗಳ ಮೇಲೆ ಜನರು ವಿಶ್ವಾಸವನ್ನುಇಡುತ್ತಾರೆಯೇ? ಇವತ್ತು ನನಗೆ ಬಂದಿರತಕ್ಕಂಥ ಸುದ್ದಿ ಬಹುತೇಕ ಸದಸ್ಯರು ಈ ಕಾರಣಕ್ಕಾಗಿ ರಾಜೀನಾಮೆಯನ್ನು ಕೊಟ್ಟರೆ will it not be a reflection on the Government?

(ಗೊಂದಲ)

ಏನು ನಿಮ್ಮ ವಾದ, ನಾವು ಹೇಳಿ ಕೇಳಿ ಮಾಡಿಸಿಕೊಳ್ಳಬಹುದು ಎಂದರೆ ಯೋಗ್ಯರಿಗೆ ಸಿಗುವುದಿಲ್ಲ. ನಾವೇ ಹೇಳಿ ಕೇಳಿ ಮಾಡಿ ಮುಗಿಸುವುದಾದರೆ ಏತಕ್ಕೆ ಇರಬೇಕು ಈ ಪಬ್ಲಿಕ್ ಸರ್ವೀಸ್ ಕಮೀಷನ್? ಅದನ್ನು ಅಬಾಲಿಷ್ ಮಾಡಿಬಿಡಿ. ಎಲ್ಲವನ್ನೂ ನಾವೇ ಮಾಡಿಬಿಡೋಣ. ಆಲ್ಲಿ ನಿಯಮಬದ್ಧವಾಗಿ ನನಗೆ ಗೊತ್ತಿರುವ ಹಾಗೆ ಅಂಕಗಳನ್ನು ಕೊಡುವುದು ಎಷ್ಟಿರಬಹುದು ಎಂದರೆ ಮ್ಯಾಕ್ಸಿಮಮ್ 14 ಕೊಡಬಹುದು. ಆ. 14ರಲ್ಲಿ ಎಷ್ಟನ್ನು ಇವರು ಹೆಚ್ಚು ಕಡಿಮೆ ಮಾಡಿದ್ದಾರೆ ಎಂದು ನೋಡುವುದಕ್ಕೆ ಅವಕಾಶ ಇದೆ. ರಿಸರ್ವೇಷನ್ಸ್‌ನ್ನು ಎ.ಬಿ.ಸಿ.ಡಿ.ಇ. ಎಂದು ಏನೇನೊ ಕ್ಯಾಟೆಗರಿ

ಮಾಡಿದ್ದೇವೆ. ಈ ಒಂದು ಹೆಡ್‌ಮಾಸ್ಟರ್‌ಗಳ ನೇಮಕಾತಿಯಲ್ಲಿ 200 ನಂಬರನ್ನು ಕೊಡುವುದಕ್ಕೆ ಅವಕಾಶ ಇದೆ. ನನಗೆ ಗೊತ್ತಿರುವ ಹಾಗೆ 70ರಿಂದ 80 ಅಂಕಗಳನ್ನು ಸಾಮಾನ್ಯವಾಗಿ ಕೊಡುತ್ತಾರೆ. ಮ್ಯಾಕ್ಸಿಮಮ್ ಅಂಕಗಳನ್ನು ಕೊಟ್ಟಿರತಕ್ಕಂಥದ್ದು 140 ನನಗೆ ತಿಳಿದಿರುವ ಹಾಗೆ. 80 ಮತ್ತು 140ರ ಮಧ್ಯೆ ಅವ್ಯವಹಾರ ನಡೆದಿದೆಯೋ? ಆ ರೀತಿ ತಾವು ಹೇಳುವಾಗ casting aspersions on the Members, is something unheard of in the history. ಆದುದರಿಂದ ದಯಮಾಡಿ ನಿಮಗೆ ಇರತಕ್ಕಂಥ ಮಾಹಿತಿಯನ್ನು ಈ ಸದನಕ್ಕೆ ಒದಗಿಸಿ ಎಂದು ಕೇಳುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಮಂತ್ರಿಗಳು ಈ ಒಂದು ಕೆ.ಪಿ.ಎಸ್.ಸಿ.ಯಲ್ಲಿ ಭ್ರಷ್ಟಾಚಾರದ ಒಂದು ಆರೋಪ ಕೇಳಿಬರುತ್ತಿದೆ. ಮತ್ತೆ ಅನೇಕ ಸರಿಸತ್ ಸದಸ್ಯರು, ಶಾಸಕರು ಈ ಬಗ್ಗೆ ಈ ರೀತಿ ಆರೋಪವನ್ನು ಮಾಡಿ ಈ ಒಂದು ವ್ಯವಸ್ಥೆಯ ಬಗ್ಗೆ ಸಂಚಿಕೆಯನ್ನು ಕಳೆದುಕೊಂಡಿದ್ದಾರೆ, ಇದಕ್ಕಾಗಿ ಮಂತ್ರಿಮಂಡಲದ ಸಭೆಯಲ್ಲಿ ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಏನು ತಕ್ಕಂಥದ್ದನ್ನು ಪ್ರವಾಸೋದ್ಯಮ ಸಚಿವರಾದ ಶಿವಮೂರ್ತಿಯವರು ಹೇಳಿದ್ದು ಪತ್ರಿಕೆಯಲ್ಲಿ ಬಂದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳೂ ಅದೇ ಧಾಟಿಯಲ್ಲಿ ಆ ಮಾತನ್ನು ಹೇಳಿದ್ದಾರೆ. ಅವರು ಮಾತನಾಡುತ್ತಾ ಮತ್ತೊಂದು ಮಾತನ್ನು ಹೇಳಿದ್ದಾರೆ, ಇಲ್ಲಿ ನಿಧಾನವಾಗುತ್ತಿದೆ, ಭ್ರಷ್ಟಾಚಾರದ ಆರೋಪ ಇದೆ, ನಮಗೆ ಬೇಕಾದವರಿಗೆ ಹಾಗೂ ನೀವು ಹೇಳಿದವರಿಗೆ ಆಯ್ಕೆ ಮಾಡುವುದಕ್ಕೆ ಆಗುತ್ತಿಲ್ಲ ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ನಾನು ಹೇಳುತ್ತೇನೆ, ಇವತ್ತು ಒಂದು ದೊಡ್ಡ ಅಪರಾಧವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೇನೋ ಎಂದು ಅನಿಸುತ್ತದೆ! ಏಕೆಂದರೆ ಒಂದು ಕಾನೂನು ಬೌಕಟ್ಟಿನಲ್ಲಿ ಅದು ಸರ್ಕಾರ ನೇಮಕ ಮಾಡಿದಂಥ ರೆಕ್ರೂಟ್‌ಮೆಂಟ್ ಕಮಿಟಿ ಇರಬಹುದು ಕೆ.ಪಿ.ಎಸ್.ಸಿ. ಇರಬಹುದು, ಅಲ್ಲಿ ರೋಸ್ಟರ್ ಸಿಸ್ಟಂ ಹಾಗೂ ಮೆರಿಟ್‌ನ್ ಆಧಾರದ ಮೇಲೆ ಆಯ್ಕೆ ಮಾಡತಕ್ಕಂಥ ಪದ್ಧತಿ ಇದೆ. ನಾವು ಹೇಳಿದವರಿಗೆ ಸಿಗಲಿಲ್ಲ ಎನ್ನುವ ಕಾರಣಕ್ಕೆ ಈ ಒಂದು ಕೆಲಸವನ್ನು ಮಾಡುವುದು ದೊಡ್ಡ ಇನ್ನೊಂದು ಭ್ರಷ್ಟಾಚಾರದ ವ್ಯವಸ್ಥೆಗೆ ನಾವೇನೇ ಕಾಸೂನಿನಂತೆ ಅವಕಾಶ ಮಾಡಿಕೊಟ್ಟಂಥ ಅಕ್ಷಮ್ಯ ಅಪರಾಧವನ್ನು ತಾವು ಮಾಡುವುದಕ್ಕೆ ತಾವು ಹೊರಟಿದ್ದೀರಿ. ಎರಡನೆಯದು ಇವತ್ತು ನೀವು ನಿಮ್ಮ ಸರ್ಕಾರ ನೇಮಕ ಮಾಡಿರುವಂಥ ನೇಮಕಾತಿ ಸಮಿತಿಗಳು ಏನಿವೆ, ಇಲ್ಲೇ ಚರ್ಚೆಯಾಯಿತು ಆ ಟೈಪಿಸ್ಟ್ ಮತ್ತು ಸ್ಟೆನೋಗಳನ್ನು ನೇಮಕ ಮಾಡುವಂಥ ಸಂದರ್ಭದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆಯ್ಕೆಯನ್ನು ರದ್ದು ಮಾಡಿದ್ದು ಉಂಟು. ಪಿ.ಸಿ.ಹೆಚ್.ನಲ್ಲಿ ಶಿಕ್ಷಕರನ್ನು ಆಯ್ಕೆ ಮಾಡತಕ್ಕಂಥ ಸಂದರ್ಭದಲ್ಲಿ ಈ ರೀತಿ ಭ್ರಷ್ಟಾಚಾರ ನಡೆಯುತ್ತದೆ ಎಂದು ಬೇರೆ ಮಾರ್ಗವನ್ನು ಅನುಸರಿಸುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿದ್ದು ಉಂಟು. ಈ ರೀತಿ ಇರಬೇಕಾದರೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ, ಯಾವ ಕೆಪಿಎಸ್‌ಸಿಯಲ್ಲಿ ಈ ರೀತಿ ಭ್ರಷ್ಟಾಚಾರ ನಡೆಯುತ್ತದೆ ಎಂದು ಸರ್ಕಾರಕ್ಕೆ ಸಾಬೀತಾದ ಮೇಲೆ ಅದನ್ನು ಸರಿಪಡಿಸುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ? ಅವರಿಗಿದ್ದ ಅಧಿಕಾರವನ್ನು ವಾಪಸ್ಸು ನೀವು ಪಡೆಯುವುದರಿಂದ, ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಆಯ್ಕೆಯಾದವರ ಗತಿ ಏನು? ಇನ್ನು ಮುಂದೆ ಕರ್ನಾಟಕ ಲೋಕಸೇವಾ ಆಯೋಗದಿಂದ, ಯಾವುದೇ ನೇಮಕ ಅದು ಡಾಕ್ಟರ್ ಇರಬಹುದು, ಇಂಜಿನಿಯರ್ಸ್ ಇರಬಹುದು, ಈ ರೀತಿ ಗೊಂದಲ ಇರುವುದರಿಂದ ಅದನ್ನು ರದ್ದು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತೀರಾ? ಈ ಎಲ್ಲಾ ಪ್ರಶ್ನೆ ಉದ್ಭವವಾಗುತ್ತದೆ. ಇದು ನೇರವಾಗಿ ಒಂದು ರಾಜಕೀಯ ನೇಡನ್ನು ತೀರಿಸಿಕೊಳ್ಳುವುದಕ್ಕೆ ಹೊರಟಿರುವಂತಹ ಕ್ರಮವೆಂದು ನಾನು ಹೇಳುತ್ತೇನೆ. ತಾವು ಯಾರನ್ನು ಹೇಳಿದಿರಿ, ತಮ್ಮ ಮಂತ್ರಿಮಂಡಲದ ಸದಸ್ಯರು ಯಾರನ್ನು ಆಯ್ಕೆಯಾಗಬೇಕೆಂದು ಲೋಕಸೇವಾ ಆಯೋಗದ ಸದಸ್ಯರ ಮೇಲೆ ಒತ್ತಡವನ್ನು ತಂದಿದ್ದೀರಿ, ಅದರಲ್ಲಿ ಕೆಲವು ಮಾಡಿರಬಹುದು ಕೆಲವು ಆಗದೇ ಇರುವಂತಹ ಒಂದು ಪರಿಸ್ಥಿತಿ ಕಂಡಮೇಲೆ ಎಲ್ಲವನ್ನು ತಮ್ಮ ಸರ್ಕಾರದ ತಪಿಮುಷ್ಠಿಯಲ್ಲಿ ಇಟ್ಟುಕೊಳ್ಳುವುದಕ್ಕೋಸ್ಕರ ಲೋಕಸೇವಾ ಆಯೋಗವನ್ನು ಬೆದರಿಸಿ ಆ ಸದಸ್ಯರನ್ನು ನಾನು ಹೇಳಿದ ಹಾಗೆ ಕೇಳದೆ ಇದ್ದರೆ ನೀನು ಮನೆಗೆ ಹೋಗಬೇಕಾಗುತ್ತದೆ. ಎನ್ನುವಂತಹ ವಾತಾವರಣವನ್ನು

ತರುವುದಕ್ಕೋಸ್ಕರ ಹೊಸ ಒಂದು ಸಂಪ್ರದಾಯವನ್ನು ಉಂಟುಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೀರಿ. ಬಹುಶಃ ನಮ್ಮ ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಪ್ರೌಢಶಾಲೆ ಮುಖ್ಯೋಪಾಧ್ಯಾಯರ ನೇಮಕದ ಹೊಣೆಯನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಹಿಂದಕ್ಕೆ ಪಡೆಯಲು ರಾಜ್ಯ ಸರ್ಕಾರ ತೀರ್ಮಾನಿಸಿರುವುದು ಸ್ವೇಚ್ಛಾಚಾರದ ಕ್ರಮವೆಂದು ಈ ಆಯೋಗದ ಅಧ್ಯಕ್ಷರಾದ ಡಾ. ದೊಡ್ಡೇಗೌಡರು ಆಪಾದಿಸಿದ್ದಾರೆ. ಅವರು ಆಪಾದನೆಯನ್ನು ಮಾಡಲಿ. ನಾನು ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅಲ್ಲಿ ಅವ್ಯವಹಾರಗಳು ನಡೆಯುತ್ತಿಲ್ಲವೆಂದು ನಾನು ಹೇಳುತ್ತಿಲ್ಲ, ಭ್ರಷ್ಟಾಚಾರ ನಡೆಯುತ್ತಿಲ್ಲವೆಂದು ಹೇಳುತ್ತಿಲ್ಲ. ಹಣ ಕೊಟ್ಟವರು ಬಂದು ನಮ್ಮ ಹತ್ತಿರ ಹೇಳಿದ್ದಾರೆ. ಆದರೆ ಈ ವ್ಯವಸ್ಥೆ ಹೇಗಿದೆ ಎಂದರೆ ಬ್ಲೆಡ್ ಕ್ಯಾನ್ಸರ್‌ನಂತೆ ಇದೆ. ಭ್ರಷ್ಟಾಚಾರ ವಿಧಾನಸೌಧದ ಮೂರನೆಯ ಮಹಡಿಯಲ್ಲಿ ಪ್ರತಿನಿತ್ಯ ನಡೆಯುತ್ತಿರಬೇಕಾದರೆ ನಿಮ್ಮ ಸರ್ಕಾರ ಮಾಡುವಂತಹ ಆಯ್ಕೆ ಸಮಿತಿಯಲ್ಲಿ ಅವ್ಯವಹಾರ ನಡೆಯುತ್ತಿರಬೇಕಾದರೆ ಅದನ್ನು ಸರಿಪಡಿಸುವಂತಹ ನೈತಿಕ ಹೊಣೆಯನ್ನು ಈ ಸರ್ಕಾರ ಹೊರಬೇಕಾಗುತ್ತದೆ. ಅದನ್ನು ಮಾಡುವುದರ ಬದಲಾಗಿ ಈ ರೀತಿ ಲಕ್ಷಾಂತರ ಜನ ಯುವಕರ ಜೀವನದ ಜೊತೆ ಚೆಲ್ಲಾಟವಾಡುತ್ತಾ, ಮೆರಿಟ್ ಪಡೆದವನಿಗೆ ಉದ್ಯೋಗ ಸಿಗದೇ ದುಡ್ಡು ಕೊಡದೆ ಇವತ್ತು ಕೆಲಸ ಆಗುವುದೇ ಇಲ್ಲವೆನ್ನುವಂತಹ ಒಂದು ಉದ್ವೇಗವಾದ ಪರಿಸ್ಥಿತಿ ಏನು ಬರುತ್ತಿದೆ ಇದೊಂದು ದೊಡ್ಡ ಅಕ್ಷಮ್ಯ ಅಪರಾಧವಾಗುತ್ತದೆ. ನಿಜಕ್ಕೂ ತಮ್ಮಲ್ಲಿ ಪ್ರಾಮಾಣಿಕತೆ ಇದ್ದರೆ, ಲೋಕಸೇವಾ ಆಯೋಗದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಅನ್ನಿಸಿದರೆ, ತಾವು ಮೆರಿಟ್ ಮತ್ತು ರೋಸ್ಟರ್ ಆಧಾರದ ಮೇಲೆ ಆಯ್ಕೆ ಮಾಡುತ್ತೇವೆ, ಮಾನ್ಯ ಯಡಿಯೂರಪ್ಪನವರೇ, ಇಂತಹ ಆಯ್ಕೆ ಸಮಿತಿಯಿಂದ ನಮಗೆ ಕೆಟ್ಟ ಹೆಸರು ಬರುತ್ತಿದೆ ಎನ್ನುವಂತಹ ಮಾತನ್ನು ತಾವು ಹೇಳಬೇಕೇ ಹೊರತು ಈ ಸದನದಲ್ಲಿ ನಿಂತುಕೊಂಡು ನೀವು ಹೇಳಿದವರಿಗೂ ನಾವು ಹೇಳಿದವರಿಗೂ ನೋಡಿ, ನಾನು ಈಗಲೇ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ, ಯಡಿಯೂರಪ್ಪನವರೇ, ಚಂದ್ರೇಗೌಡರೇ, ನೀವು ಹೇಳಿದವರಿಗೂ ನಾವು ಹೇಳಿದವರಿಗೂ ಯಾರಿಗೂ ಸಿಗದೇ ಇರಬಹುದು. ಅದಕ್ಕಾಗಿ ಈ ದಿಟ್ಟ ಹೆಜ್ಜೆಯನ್ನು ಇಡುತ್ತಿದ್ದೇವೆ. ಅಂಥ ಮಾತು ಈ ರಾಜ್ಯದ ಮುಖ್ಯಮಂತ್ರಿಗಳಿಂದ ಬರದೆ ಈ ರೀತಿ ಹೇಳುತ್ತಿರುವುದು ಇದೊಂದು ಕರಾಳ ದಿವಸವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜವಾಬ್ದಾರಿ ಸ್ಥಾನದಲ್ಲಿರುವಂತಹವರು ನೀವು, ಇವತ್ತು ಸಂವಿಧಾನದ ಪ್ರಕಾರ ರಾಷ್ಟ್ರಪತಿಗಳು ರಾಜ್ಯಪಾಲರ ಮೂಲಕ ನೇಮಕವಾಗಿರುವಂತಹ ಈ ಸಮಿತಿಗೆ ಹಕ್ಕಿದೆ; ಈ ವ್ಯವಸ್ಥೆ ಅನೇಕ ವರ್ಷಗಳಿಂದಲೂ ನಡೆದುಕೊಂಡು ಬರುತ್ತಿದೆ. ಈ ವ್ಯವಸ್ಥೆ ಬಗ್ಗೆಯೇ ಜನರಲ್ಲಿ ಅಪನಂಬಿಕೆ ಉಂಟುಮಾಡುವಂತಹ ಒಂದು ಪ್ರಯತ್ನವನ್ನು ನೀವೇನು ಮಾಡುತ್ತಿದ್ದೀರಿ ಇದು ತಪ್ಪಾಗಿದೆ ಎಂದು ನಾನು ನೇರವಾಗಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ಅದನ್ನು ಈಗ ವಾಪಸ್ಸು ಪಡೆದಿದ್ದೀರಿ. ಇದರಿಂದಾಗಿ ಆಯ್ಕೆಯಾಗಲು ದುಡ್ಡು ಕೊಟ್ಟವರ ಗತಿ ಏನು? ನೀವು ಹೇಳುವ ಪ್ರಕಾರ ಭ್ರಷ್ಟಾಚಾರ ನಡೆದಿದ್ದರೆ ಇನ್ನು ಮುಂದೆ ಅಲ್ಲಿ ಯಾವುದು ಆಯ್ಕೆಯಾಗದ ಹಾಗೆ ನೋಡಿಕೊಳ್ಳುತ್ತೀರಾ? ಈ ರೋಸ್ಟರ್ ಮತ್ತು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡುವುದಕ್ಕೆ ಹೊಸ ವ್ಯವಸ್ಥೆ ನಿಮ್ಮ ಕಣ್ಣು ಮುಂದೆ ಏನಾದರೂ ಇದೆಯೇ? ಇದನ್ನು ಮಾಡುವುದರೊಳಗೆ ಹುದ್ದೆಗಳು ಖಾಲಿಯಿರುವ ಆ ಶಾಲೆಗಳ ಗತಿ ಏನು? ಇದೆಲ್ಲಾ ತುಂಬಾ ಗಂಭೀರವಾದ ವಿಚಾರಗಳಾಗಿವೆ.

ಶ್ರೀ ಕೆ.ಹೆಚ್. ರಂಗನಾಥ್ : ಯಾರ್ಯಾರೋ ದುಡ್ಡನ್ನು ಕೊಟ್ಟು ಏನೋ ಮಾಡಿಕೊಂಡಿದ್ದಾರೆ ಅನ್ನುತ್ತಿದ್ದೀರಿ, ಅಂದರೆ ಅವರಿಗೆಲ್ಲಾ ಈಗ ಸಹಾಯ ಮಾಡಬೇಕೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸಹಾಯ ಅಲ್ಲ; ವಾಪಸ್ಸು ಕೊಡಿಸಬೇಕಲ್ಲಾ, ಇಲ್ಲದಿದ್ದರೆ "ಕೊಟ್ಟವನು ಕೋಡಂಗಿ ಈಸಿಕೊಂಡವನು ವೀರಭದ್ರ" ಆ ರೀತಿಯಾಗುತ್ತದೆ. ಆದ್ದರಿಂದ, ಇದುವರೆಗೆ ನಾನು ತುಂಬಾ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ರಾಜ್ಯದ ಇತಿಹಾಸದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಬಗ್ಗೆ ಯಾವ ಒಬ್ಬ ಮುಖ್ಯಮಂತ್ರಿಗಳೂ ಈ ರೀತಿ ಹೇಳಿರುವುದನ್ನು ನಾನು ಕೇಳಿಲ್ಲ. ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನಿಮ್ಮ ಹತ್ತಿರ ಸಾಬೀತು ಮಾಡಲು ಏನು ಇದೆ?

ಏಕೆಂದರೆ ಈ ಸದನದಲ್ಲಿ ಯಾವುದೇ ಭ್ರಷ್ಟಾಚಾರದ ವಿಷಯವನ್ನು ಪ್ರಸ್ತಾಪ ಮಾಡಿದಾಗ ತಾವು ಅದಕ್ಕೆ ದಾಖಲೆಗಳನ್ನು ಕೊಡುತ್ತೀರಾ ಎಂದು ಕೇಳುತ್ತೀರಿ. ನೀವು ಲೋಕಸೇವಾ ಆಯೋಗದಿಂದ ಈ ಆಯ್ಕೆಯನ್ನು ರದ್ದು ಮಾಡಿ ವಾಪಸ್ಸು ಪಡೆಯುತ್ತಿದ್ದೀರಲ್ಲಾ, ಶಾಸಕರು ಹಾಗೂ ಸಂಬಂಧಪಟ್ಟವರು ಯಾರಾದರೂ ಬಂದು ನಿಮಗೆ ಅರ್ಜಿಯನ್ನು ಕೊಟ್ಟಿದ್ದಾರೆಯೇ? ಕೊಟ್ಟಿದ್ದರೆ ಅದನ್ನು ಏನಾದರೂ ತನಿಖೆ ಮಾಡಿದ್ದೀರಾ? ನಿಮಗೆ ಸಾಬೀತಾಗಿದೆಯೇ ಇದು ಕೇವಲ ತಮ್ಮ ಸ್ವಾರ್ಥಕೋಸ್ಕರ ನಿಮಗೆ ಬೇಕಾದವರಿಗೆ ಉದ್ಯೋಗಗಳನ್ನು ಕೊಡುವುದಕ್ಕೋಸ್ಕರ ರಾಜಕೀಯ ಸೇಡು ತೀರಿಸಿಕೊಳ್ಳುವುದಕ್ಕೋಸ್ಕರ ಸಂವಿಧಾನ ಬಾಹಿರವಾಗಿ ಮಾಡುತ್ತಿರುವಂತಹ ಅಕ್ಷಮ್ಯ ಅಪರಾಧ ಇದು. ದಯಮಾಡಿ ಅವರಲ್ಲಿ ಕ್ಷಮಾಪಣೆಯನ್ನು ಕೇಳಿ ಅವರಿಗೆ ಇರುವಂತಹ ಅಧಿಕಾರವನ್ನು ವಾಪಸ್ಸು ಕೊಟ್ಟು ಸರಿಯಾದ ರೀತಿಯಲ್ಲಿ ಮೊದಲು ನೀವು ಸರ್ಕಾರವನ್ನು ನಡೆಸಿ. ವಿಧಾನಸೌಧದ ಮೊದಲನೆಯ ಮಹಡಿಯಲ್ಲಿ ನಡೆಯುತ್ತಿರುವಂತಹ ಭ್ರಷ್ಟಾಚಾರವನ್ನು ಮೊದಲು ನಿಲ್ಲಿಸಿ. ಮೊನ್ನೆ ನಡೆದ ಕಂಪ್ಯೂಟರ್ ವ್ಯವಹಾರದಲ್ಲಿ 5 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ 2 ಕೋಟಿ ರೂಪಾಯಿಗಳಿಗೆ 100 ಕಂಪ್ಯೂಟರ್‌ಗಳನ್ನು ನಾನು ತಂದುಕೊಡುವುದಕ್ಕೆ ಸಿದ್ಧನಿದ್ದೇನೆ. ಅಂದರೆ ಇನ್ನು 3 ಕೋಟಿ ರೂಪಾಯಿಯನ್ನು ನುಂಗಿಬಿಟ್ಟಿದ್ದೀರಾ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಣಿಯವರೆ, ಇವತ್ತು ನಾನು ಹೇಳುವಂತದ್ದು ಯಾವ ಮಟ್ಟಕ್ಕೆ ಹೋಯಿತು. ಈ ಸರ್ಕಾರ? ನಿಮ್ಮ ಕಳಕಳಿಯನ್ನು ನಾನು ಒಪ್ಪುತ್ತೇನೆ. ಲೋಕಸೇವಾ ಆಯೋಗದಲ್ಲಿ ಭ್ರಷ್ಟಾಚಾರ ನಡೆದಿದ್ದರೆ ಆ ಸದಸ್ಯರ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ? ನೋಟೀಸ್ ಕಳುಹಿಸಿದ್ದೀರಾ? ಮುಂದಿನ ಕ್ರಮವೇನು? ಈ ಪ್ರಶ್ನೆಯಲ್ಲಾ ಉದ್ಭವವಾಗುತ್ತದೆ. ಅವರು ಅಪರಾಧ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಬೇಕು. ಭ್ರಷ್ಟಾಚಾರ ನಡೆದಿರುವುದರ ಬಗ್ಗೆ ತಮ್ಮ ಹತ್ತಿರ ಏನಾದರೂ ಸಾಕ್ಷ್ಯಧಾರಗಳಿದ್ದರೆ ಅದನ್ನು ಸ್ಪಷ್ಟಪಡಿಸಬೇಕು. ಎರಡನೆಯದಾಗಿ ಇನ್ನು ಮುಂದೆ ಲೋಕಸೇವಾ ಆಯೋಗದಿಂದ ಯಾವುದೇ ಸೆಲೆಕ್ಷನ್ ಆಗುವುದಿಲ್ಲ. ಅಲ್ಲಿ ಸಂದರ್ಶನ ನಡೆಯುವುದಿಲ್ಲ ಎಂಬ ಮಾತು ಇದ್ದರೆ ಅದನ್ನು ಸಹ ತಾವು ಸ್ಪಷ್ಟಪಡಿಸಬೇಕು. ಮೂರನೆಯದು ಈ ಮೆರಿಟ್ ಮತ್ತು ರೋಸ್ಟರ್ ಸಿಸ್ಟಂನಲ್ಲಿಯೇ ಇನ್ನು ಮುಂದೆ ಆಯ್ಕೆ ಮಾಡುವಂತಹದ್ದನ್ನು ಮಾಡಬೇಕು. ಕೊನೆಯದಾಗಿ ಈಗ ಯಾರು ಆಯ್ಕೆಯಾಗಿದ್ದಾರೆ, ಅವರ ಮುಂದಿನ ಭವಿಷ್ಯದ ಗತಿ ಏನು ಎಂಬುದನ್ನು ಹೇಳಬೇಕೆಂದು ನಾನು ನೇರವಾಗಿ ಸರ್ಕಾರವನ್ನು ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಣಿಯವರೆ.....

ಉಪಾಧ್ಯಕ್ಷಣಿಯವರು : ನೀವು ಇದಕ್ಕೆ ಸಿಗ್ನೇಟರಿ ಅಲ್ಲ. ಈ ನಿಲುವಳಿ ಸೂಚನೆಗೆ ತಾವು ಸಹಿಯನ್ನು ಮಾಡಿಲ್ಲ. ಆದರೂ ಸಹ ಎಲ್ಲರೂ ಮಾತನಾಡುವುದಕ್ಕೆ ಶುರುಮಾಡಿದರೆ ಹೇಗೆ?

ಶ್ರೀ ಸಿ. ಬೈರೇಗೌಡ : ಇದು ಬಹಳ ಪ್ರಮುಖವಾದಂತಹ ವಿಚಾರವಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಅಂದರೆ, ನೀವು ಹೇಳಿದವರು ನಾವು ಹೇಳಿದವರು ಅಲ್ಲಿ ಆಯ್ಕೆ ಆಗುವುದಿಲ್ಲ ಅಂದರೆ ಅವರಿಗೆ ಇಂತಹವರನ್ನೇ ಆಯ್ಕೆ ಮಾಡು ಎಂದು ಹೇಳುವುದಕ್ಕೆ ಏನು ಆಧಾರ? ಅದಕ್ಕೆ ಆಧಾರ ಇರಬೇಕಲ್ಲಾ?

ಲೋಕಸೇವಾ ಆಯೋಗದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆಯೆಂದರೆ ನಾವು ಅದರ ಬಗ್ಗೆ ಹೇಳಬೇಕೆಂದರೆ ಅದಕ್ಕೆ ಆಧಾರ ಬೇಕಲ್ಲಾ. ಅದು ಭ್ರಷ್ಟಾಚಾರವಲ್ಲದೆ ಮತ್ತೇನು ಆಗುತ್ತದೆ? ಇವೊತ್ತು ಸರ್ಕಾರ ತೀರ್ಮಾನ ಮಾಡಿದ್ದಾರೆ. ಅಲ್ಲಿ ಪುನಃ ಭ್ರಷ್ಟಾಚಾರ ನಡೆಯುತ್ತಿದೆ ಎನ್ನತಕ್ಕಂಥ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಭ್ರಷ್ಟಾಚಾರ ಎಸಗಿದಂತಹವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಯಾರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅಂತಹವರ ಮೇಲೆ ಇವೊತ್ತು ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಲೋಕಸೇವಾ ಆಯೋಗದಲ್ಲಿ ದುಡ್ಡು ಕೊಟ್ಟರೆ ಕೆಲಸ ಖಾಯಂ. ಆದರೆ, ನೀವು ಮಾಡಿರುವಂಥ ಆಯ್ಕೆ ಸಮಿತಿಯಲ್ಲಿ ದುಡ್ಡು ಕೊಟ್ಟರೂ ಪರ್ಮನಾಮವಾಗುತ್ತಿದೆ.

ಉಪಾಧ್ಯಕ್ಷೆಣಿಯವರು : ಈಗ ಎಲ್ಲರೂ ಮಾತನಾಡುವುದಕ್ಕೆ ಅವಕಾಶವಿಲ್ಲ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷೆಣಿಯವರೇ, ನಾನು ಏಕೆ ಎದ್ದು ನಿಂತೆ ಎಂದರೆ ನಾನು ಮುಖ್ಯವಾದ ವಿಷಯವನ್ನು ಬೆಳಿಗ್ಗೆ ಹೇಳುವಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರಲಿಲ್ಲ, ಆಗ ಕಾನೂನು ಮಂತ್ರಿಗಳು ಮಾತ್ರ ಇದ್ದರು. ಈಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಡುತ್ತಾ, ಈ ಭ್ರಷ್ಟಾಚಾರದ ಬಗ್ಗೆ It is not the only-ground on which we have done this, but there are any other grounds ಎಂದರು. ಅಂದರೆ, ಈ ಗ್ರೌಂಡ್ ಸಹ ಒಂದು ಕಾರಣವೆಂದು ಹೇಳಿದರು. ಇದನ್ನು ಹೇಳುವ ಅಧಿಕಾರ ಇವರಿಗೆ ಎಲ್ಲಿಂದ ಬಂತು ಎಂದು ನಾನು ಕೇಳುತ್ತೇನೆ. ಸಂವಿಧಾನ ಇದೆ ಎಂದು ಈ ಸರ್ಕಾರ ತಿಳಿದಿದೆಯೇ? ಏನೆಂದು ಈ ಸರ್ಕಾರ ತಿಳಿದಿದೆ? ಬೆಳಿಗ್ಗೆ ನಾನು ಹೇಳುತ್ತಿದ್ದುದು: ಸಂವಿಧಾನದೊಳಗೆ ಕೆಲವು ಸಂಸ್ಥೆಗಳಿವೆ, ಅವುಗಳ ಸ್ವಾತಂತ್ರ್ಯವನ್ನು ರಕ್ಷಣೆ ಮಾಡುವುದಕ್ಕೆ ನಾವು ನಿಯಮಗಳನ್ನು ಅಳವಡಿಸಿದ್ದೇವೆ. ಆ ಕಾರಣ, ಆ ಸಂಸ್ಥೆಗಳಲ್ಲಿರುವ ಸಂಬಂಧಪಟ್ಟವರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾದರೆ we have introduced a procedure which is called the procedure for impeachment. A similar provision-is there for the union Public Service Commission and the state Public Service commission just the same-way the procedure is formulated incase of judicigry and the election commission. ಇವರಿಗೆ ಎಲ್ಲಿಂದ ಅಧಿಕಾರ ಬಂತು ಎಂದು ನಾನು ಕೇಳುತ್ತಿದ್ದೇನೆ. ನಾನು ನಮ್ಮ ಮೂಲಕ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಂವಿಧಾನದ 317ನೇ ನಿಯಮವನ್ನು ಓದಬೇಕು. ಅದರಲ್ಲಿ ಏನಿದೆಯೆಂದರೆ, ರಾಷ್ಟ್ರಾಧ್ಯಕ್ಷರಾಗಲಿ ಅಥವಾ ರಾಜ್ಯಪಾಲರಾಗಲಿ ಯಾರು ನೇಮಕ ಮಾಡುತ್ತಾರೋ, ಅವರೇ ಈ ಸಂಸ್ಥೆಗಳ ಮೇಲೆ ಕ್ರಮ ತೆಗೆದುಕೊಳ್ಳುವ್ದಕ್ಕಿಂತ ಮುಂದೆ ಪೂರ್ವಭಾವಿಯಾಗಿ ಆ ಸಂಸ್ಥೆಯಲ್ಲಿ ಏನು ಅಕ್ರಮ ನಡೆದಿದಯೋ ಅದನ್ನು ಸುಪ್ರೀಂಕೋರ್ಟಿಗೆ ರೆಫರ್ ಮಾಡಿ, ಅಲ್ಲಿಂದ ವರದಿ ಬಂದ ನಂತರ ಕ್ರಮ ಕೈಗೊಳ್ಳಬೇಕು ಎಂದು ಇದೆ. ಈ ಸಂಸ್ಥೆಗಳಿಗೆ ಇಷ್ಟು ರಕ್ಷಣೆ ಕೊಟ್ಟಿದ್ದೇವೆ. ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಈ ಸಂಸ್ಥೆಗಳ ಕಾರ್ಯ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎನ್ನುವಂಥ ಒಂದು ಸದುದ್ದೇಶದಿಂದ ಈ ಸಂಸ್ಥೆಗಳಿಗೆ ಈ ರೀತಿಯ ರಕ್ಷಣೆ ಕೊಟ್ಟಿದ್ದೇವೆ. ಯಾವುದೇ ಕಾರಣಕ್ಕೂ ಇವರು ಒಂದು ಸಲ ಇಷ್ಟು ನೇಮಕ ಮಾಡಿ ಎಂದು ಪತ್ರ ಬರೆದ ನಂತರ, ಅದು ಅಂತಿಮ ಫೈಟ್ ಮುಟ್ಟಿದ ನಂತರ, ನನಗೆ ಗೊತ್ತಿರುವ ಪ್ರಕಾರ, ಈ ಪಟ್ಟಿ 18ನೇ ತಾರೀಖು ಪ್ರಕಟವಾಗಬೇಕಾಗಿತ್ತು. ಇದಕ್ಕೆ ಅವಕಾಶ ಮಾಡಿಕೊಟ್ಟರೆ, ಈ ಸಂವಿಧಾನದಲ್ಲಿ ಲೋಕಸೇವಾ ಆಯೋಗದ ಬಗ್ಗೆ ಏನು ನಾವು ನಿಯಮಗಳನ್ನು ಬರೆದಿದ್ದೇವೆ, that can be totally negated by such interferencs in instalments by any Government ಆಗ ಸಂವಿಧಾನಕ್ಕೆ ಅರ್ಥವೇ ಇರುವುದಿಲ್ಲ. The only thing that is left to this Government is to apologise to the Constitution, otherwise this Government will be called as an apology to the Constitution.

Sri Qumarul Islam : While replying the Hon'ble Chief Minister has said that he had taken this decision to give more justice to the people of different areas of this State.

He said that in the previous Government there were departmental recruitment committee for the recruitment. Even if there is a recruitment committee, the area of Hydarabad Karnataka will not get justice. You see the records of the Public Service Commission as will as the DLRC's. I just

wanted to know whether it is there in the mind of the Hon'ble chief minister that there will be Regional Committees to get equal justice to all. Such committees are already existing in the neighbouring states of Andhra Pradesh and Maharashtra. I want reply form the Hon'ble Chief Minister. ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀಮಾನ್: ಯಡಿಯೂರಪ್ಪನವರು ಮತ್ತು ಶ್ರೀಮಾನ್ ಬೈರೇಗೌಡರು ಹೇಳಿರತಕ್ಕ ವಿಚಾರಗಳು ಒಂದೇ ರೂಪದಲ್ಲಿದೆ ಎಂದು ನಾನು ಬಾವಿಸಿದ್ದೇನೆ. ಕೆಲವು ವಿವರಣೆಗಳನ್ನು ಕೆಲವು ಪ್ರಶ್ನೆಗಳ ಬಗ್ಗೆ ತಾವು ಪ್ರಸ್ತಾಪ ಮಾಡಿದರೂ ಕೂಡ ಮಾನ್ಯ ಪ್ರೊ. ನಂಜುಂಡಸ್ವಾಮಿಯವರು ಕೇಳಿರತಕ್ಕ constitutional position vis-a-vis the creation of the Public Service Commission and if any action is to be taken against the Hon'ble Members of the Public Service Commission under the Constitution, what exactly is the procedure prescribed under the Constitution itself, if I understand the Hon'ble member. Now the Point is, apart from what the Hon'ble member Qamarul Islam has touched as far the regional imbalance or something like that, giving proper representation to different area.....ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರತಕ್ಕದ್ದೇನೆಂದರೆ, ಇವತ್ತು ನಾವು ಒಂದು ಪಟ್ಟಿಯಲ್ಲಿ ಕೆಲವು ಹುದ್ದೆಗಳ ಹೆಸರನ್ನು ಪಿ.ಎಸ್.ಸಿ.ಗೆ ಒದಗಿಸಿಕೊಟ್ಟು ರೂಲ್ಸ್ ಪ್ರಕಾರ ನೀವು ಇಂಥ ಹುದ್ದೆಗಳನ್ನು ತುಂಬುವುದಕ್ಕಾಗಿ ನೇಮಕ ಮಾಡಿ ಎಂದು ಹೇಳಿದ ಮೇಲೆ work commences as far as Public Service Commission is concerned. ಇಲ್ಲದಿದ್ದರೆ ಕೆಲಸ ಪೂರ್ಣವಾಗುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಅದು ಒಂದು ಸ್ಟೇಜ್ ಇನ್ನೊಂದು ಸ್ಟೇಜ್ ಅದು ನಡೆಯುತ್ತಿರಬೇಕಾದರೆ there is no bar, legal bar to stop it and take back the powers that you have entrusted to the Public Service Commission. There is no legal bar. ಮೂರನೆಯದಾಗಿ ಅವರು ಪಟ್ಟಿಯನ್ನು ಮಾಡಿದ ಮೇಲೆ, ಮತ್ತು ಅದು ಸರ್ಕಾರಕ್ಕೆ ಬಂದಮೇಲೆ ಅದನ್ನು ಒಪ್ಪಿಕೊಳ್ಳುವುದು ಅಥವಾ ಬಿಡುವುದು ಸರ್ಕಾರಕ್ಕೆ ಬಿಟ್ಟಿದ್ದುದು. ತಾವು ಸರ್ಕಾರವನ್ನು ನಡೆಸಬೇಕಾದರೆ ಅಲ್ಲಿಂದ ಪಟ್ಟಿ ಬಂದ ಮೇಲೆ ತಾವೂ ಕೂಡ ರಿಜೆಕ್ಟ್ ಮಾಡಿರತಕ್ಕದ್ದು ದಾಖಲೆಯಲ್ಲಿದೆ, ಆಗಾದರೆ ಯಾವ ಗ್ರೌಂಡ್ ಮೇಲೆ ಆ ಒಂದು ಲಿಸ್ಟ್ ಅನ್ನು ರಿಜೆಕ್ಟ್ ಮಾಡಿದಿರಿ ಎಂದು ನಾಳೆ ಮಾನ್ಯ ಸದಸ್ಯರು ಕೇಳಿದರೆ ಏನು ಉತ್ತರವನ್ನು ಕೊಡಲುಸಾಧ್ಯವಾಗುತ್ತದೆ ಇದಕ್ಕೆ ಹಲವಾರು ಕಾರಣಗಳಿವೆ. ಇವತ್ತು ನಾವು ಅಧಿಕಾರದಲ್ಲಿದ್ದೇವೆ. ಎನ್ನತಕ್ಕ ದೃಷ್ಟಿಯಿಂದ ಅಥವಾ ತಾವು ಅಧಿಕಾರದಲ್ಲಿದ್ದೀರಿ ಎನ್ನತಕ್ಕ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ಈ ರೀತಿ ದೇವರಾಜ ಅರಸುರವರ ಕಾಲದಲ್ಲಿಯೂ ಕೂಡ ನಡೆದಿದೆ. Please go through the records. ಮತ್ತೆ ಅದಕ್ಕಿಂತ ಮೊದಲೂ ಕೂಡ ಈ ರೀತಿ ನಡೆದಿರತಕ್ಕದ್ದು ದಾಖಲೆಗಳಲ್ಲಿದೆ. ಲಿಸ್ಟ್ ಬಂದ ಮೇಲೆಯೂ ಸಹ ರಿಜೆಕ್ಟ್ ಆಗಿರತಕ್ಕ ಹಲವಾರು ಉದಾಹರಣೆಗಳಿವೆ. ಸರ್ಕಾರದವರು ಏಕೆ ಈ ರೀತಿ ಮಾಡುತ್ತಾರೆ? ಇವತ್ತು ನ್ಯಾಯ ಸಿಗಬೇಕು ಎನ್ನತಕ್ಕ ವಿಚಾರದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಯಾರಾದರೂ ಹಣವನ್ನು ಕೊಟ್ಟರೆ ಗ್ಯಾರಂಟಿಯಾಗಿ ಸಿಗುತ್ತದೆ ಎಂದು ಹೇಳಿದರು. ಅದು ರೆಕಾರ್ಡ್‌ನಲ್ಲಿದೆ. ನಾವು ಇಲಾಖಾ ನೇಮಕಾತಿ ಸಮಿತಿಯನ್ನು ಮಾಡಿದ ಮೇಲೆ, ಇಲ್ಲಿ ಯಾವ ಗ್ಯಾರಂಟಿ ಇದೆ ಎಂದು ಕೇಳಿದರೆ, ಹಾಗಾದರೆ ನಾನು ಕೇಳುತ್ತೇನೆ, I am posing this question to you through the Hon'ble Chair. Is it his opinion that the moment the money is given to one of the Hon'ble member of the P.S.C-through I do not hold this view, his opinion-that he is going to get the job and his name will be cleared by the Public Service Commission? ಇಲ್ಲಿರತಕ್ಕ

ಪ್ರಶ್ನೆಯೊಂದನ್ನು ದಯಮಾಡಿ ಮಾನ್ಯ ಸದಸ್ಯರು ಗಮನಿಸಬೇಕು. ನಮ್ಮ ನಿಮ್ಮ ಅಭಿಪ್ರಾಯ ಏನಿದೆ ಎಂದರೆ ಮೀಸಲಾತಿಯು ಕ್ಯಾಟಗರಿ ಪ್ರಕಾರ ನ್ಯಾಯ ಸಿಗಬೇಕು, ಮುಂತಾದ ವಿಚಾರಗಳು ಅಲ್ಲಿ ಬಂದಿರುತ್ತವೆ. ಇವುಗಳು ನೇಮಕಾತಿ ಸಮಿತಿಯ ಮುಂದೆ ಬರುವುದಿಲ್ಲವೆಂದು ನಾನು ಹೇಳುತ್ತಿಲ್ಲ. ಕೆಲವು ಸಲ ಹಿಂದೆಯೂ ಕೂಡ ಈ ವಿಚಾರ ಪ್ರಸ್ತಾಪಕ್ಕೆ ಬಂದಿದೆ. ತಮಗೆ ಗೊತ್ತಿದೆ, ಶ್ರೀಮಾನ್ ಬಿ. ರಾಚಯ್ಯನವರು ಶಿಕ್ಷಣ ಮಂತ್ರಿಗಳಾಗಿದ್ದರು, ನಾವುಗಳು ಅಲ್ಲಿ ಕುಳಿತಿದ್ದವು.

ನೀವು ಡಿ.ಎಲ್.ಆರ್.ಸಿ. ಮೂಲಕ, ಅಂದರೆ Department Recruitment Committee ಮೂಲಕ ಆಯ್ಕೆ ನಡೆಯತಕ್ಕ ಕಾಲದಲ್ಲಿ 15 ಸಾವಿರದಿಂದ 20 ಸಾವಿರದವರೆಗೆ ಭ್ರಷ್ಟಾಚಾರ ನಡೆದಿದೆ ಎಂದು ಈ ಸದನದಲ್ಲಿ ಕೇಳಿಬಂತು. ತಮಗೆ ಗೊತ್ತಿರುವ ಹಾಗೆ ಆಗಲೂ ಕೂಡ ಅರ್ಧಂಬರ್ಧ, ಮುಕ್ಕಾಲು ಭಾಗ ಸಂದರ್ಶನ ನಡೆದಿತ್ತು.

Prof. M.D. Nanjunda Swamy : D.L.R.C. does not emerge from the Constitution. It is your own creation. It is the creation of the Government. You cannot compare two things.

Shri S. Bangarappa : I am trying to meet your point.

ನನಗೆ ಗೊತ್ತಿದೆ. ಆ ಕಾಲದಲ್ಲಿ ತಮಗೆ ಗೊತ್ತಿರುವಂತೆ ಅಲ್ಲಿ ಕೇವಲ ನಮ್ಮ ಪಕ್ಷದವರಿಂದ ಮಾತ್ರವಲ್ಲ, ತಮ್ಮ ಕಡೆಯಿಂದ ಕೂಡ ಕೇಳಿ ಬಂತು. ಅದು ಕೇಳಿ ಬಂದಮೇಲೆ ಸರ್ಕಾರ ಏನು ಮಾಡಿತು ಎಂದರೆ ಇಂಟರವ್ಯೂ ಅರ್ಧಂಬರ್ಧ ಆಗಿದ್ದರೂ ಕೂಡ ಅದನ್ನು ಅಷ್ಟಕ್ಕೇ ನಿಲ್ಲಿಸಿದರು. ಅನಂತರ ಇಂಟರವ್ಯೂ ನಡೆಯಲಿಲ್ಲ. ಈ ಲೋಕಸೇವಾ ಆಯೋಗವು ರಾಜ್ಯಂಗಬದ್ಧವಾಗಿ ರಚನೆಯಾದಂಥ ಸಂಸ್ಥೆಯಾದರೂ ಕೂಡ ಇಂಟರ್‌ವ್ಯೂವನ್ನು ಅರ್ಧಕ್ಕೇ ನಿಲಿಸಿದ್ದೇವೆ. ನೀವು ಹೇಗೆ ಹೇಗೆ ನಿಲ್ಲಿಸಿದಿರೋ ಅದೇ ರೀತಿ ನಾವೂ ಕೂಡ ನಿಲ್ಲಿಸಿದ್ದೇವೆಂದು ಹೇಳುವಂಥ ಅವಕಾಶ ನನಗಿದೆ. ಆದರೂ ಕೂಡ ಇದರಲ್ಲಿ ನ್ಯಾಯ ಸಿಕ್ಕಬೇಕೆಂಬ ದೃಷ್ಟಿಯಿಂದ either through provisions of the Constitution or the Government orders, we have given the stay for the Recruitment. After all, these are no doubt created under the Constitution itself as part and parcel of the whole administration. This is also the creation of the Constitution itself. ಆ ಕಾಲದಲ್ಲಿ ಕೂಡ ಅರ್ಧಕ್ಕೇ ನಿಲ್ಲಿಸಿದ್ದಾರೆ. ಅದೇ ರೀತಿ ನಾವೂ ಕೂಡ ಅರ್ಧಕ್ಕೇ ನಿಲ್ಲಿಸಿದ್ದೇವೆ. ಆದುದರಿಂದಲೇ ನಾನು ಹೇಳುತ್ತಿದ್ದೇನೆ. ಇದು ರಾಜ್ಯಾಂಗಬದ್ಧವಾಗಿ ರಚನೆ ಮಾಡಿರತಕ್ಕ ಸಂಸ್ಥೆ ಇರಬಹುದು ಅಥವಾ ಇಲಾಖೆಯಿಂದ ರಚನೆ ಮಾಡಿರತಕ್ಕ ಸಂಸ್ಥೆ ಇರಬಹುದು, ಅಲ್ಲಿ ಎಲ್ಲರಿಗೂ ನ್ಯಾಯ ಸಿಕ್ಕಬೇಕು. ಅಲ್ಲಿ ಜನತೆಗೆ ನ್ಯಾಯ ಸಿಕ್ಕುತ್ತಿಲ್ಲ, ಜನತೆ ನ್ಯಾಯದಿಂದ ವಂಚಿತರಾಗುತ್ತಿದ್ದಾರೆ, ಅಲ್ಲಿ ಅವರಿಗೆ ಅನ್ಯಾಯವಾಗುತ್ತಿದೆ ಎನ್ನತಕ್ಕ ವಿಚಾರ ಕಂಡು ಬಂದಾಗಲೂ ಕೂಡ ನಾವು ಕಣ್ಣುಮುಚ್ಚಿ ಕುಳಿತಿದ್ದರೆ ನಾಳೆ ನೀವೇ ಒಂದು ಪ್ರಶ್ನೆಯನ್ನು ಕೇಳಬಹುದು. ಆಂದರೆ ನಾನು ಈ ಮಾತನ್ನು ನಿಮಗೆ ಹೇಳುತ್ತಿಲ್ಲ. Hon'ble Member sitting on that side or this side of the House.

ನೀವು ಏನು ಕೇಳಬಹುದೆಂದರೆ ನಾವು ಇಷ್ಟು ಹೇಳಿದರೂ, ಇಷ್ಟೊಂದು ಅನ್ಯಾಯವಾಗುತ್ತಿದೆ ಎಂದು ನಾವು ನಿಮಗೆ ತಿಳಿಸಿದರೂ ಕೂಡ ನೀವು ಸುಮ್ಮನೆ ಕೂತುಕೊಂಡಿದ್ದೀರಿ, "Though you had full powers to stop it in the middle" ಎನ್ನತಕ್ಕ ಮಾತನ್ನು ನೀವು ಕೇಳಿದಾಗ ನಾವು ಏನು ಮಾಡಬೇಕು? ಇದು ರಾಜ್ಯಾಂಗ ಬದ್ಧವಾಗಿ ರಚನೆ ಆಗಿರತಕ್ಕ ಸಂಸ್ಥೆ ಬಹಳ ಗೌರವ ಇದೆ. ಲೋಕಸೇವಾ ಆಯೋಗದ ಸದಸ್ಯರ ಬಗ್ಗೆ ನನಗೆ ಗೌರವ ಇದೆ. ಆದುದರಿಂದ ನಾನು ಹೇಳುತ್ತಿದ್ದೇನೆ. But the more important concrn of us all is, as far as the candiates who go and appear before the Interview are concerned, for expecting justice either at the hands of PSC or DLRC or so many committes that we create. After all, it is our own creation. Infact we are

responsible for creation of the Constitution and the same Constitution has created all these bodies. What exactly is the purpose of these bodies? To give justice to the persons who are in need of justice. ಇದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಇನ್ನು ಲೋಕಸೇವಾ ಆಯೋಗದ ಟೇರ್ಮಾನ್‌ರವರು ಇದನ್ನು ಸ್ವೇಚ್ಛಾಚಾರ ಇತ್ಯಾದಿ ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಉತ್ತರ ಕೊಡುವುದಿಲ್ಲ. ಏಕೆಂದರೆ ನನಗೆ ಇದು ಗೊತ್ತಿಲ್ಲ. ಪತ್ರಿಕೆಯಲ್ಲಿ ಈ ವಿಚಾರ ಬಂದಕೂಡಲೇ ಅವರು ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ಮತ್ತೆ ನಾನು ಉತ್ತರವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಅವರು ಹೇಳಿರುವುದರ ಬಗ್ಗೆ ನಾನು ಟಚ್‌ಮಾಡುವುದಿಲ್ಲ. ಅದನ್ನು ಇಂಪೀಚ್ ಮಾಡತಕ್ಕದ್ದರ ಬಗ್ಗೆ ಮಾನ್ಯ ಪ್ರೊಫೆಸರ್‌ರವರು ಹೇಳಿದರು. That is a differenthing but once that has happened during your regime and it may happen during our regime also. ಹಾಗೆ ಬಂದಾಗ ತಾವು ಏನು ಆಕ್ಷನ್ ತೆಗೆದುಕೊಂಡಿದ್ದಿರಿ ಅಂಥ ಆಕ್ಷನ್‌ನ್ನು ಬಿಟ್ಟು ಹೊಸದಾದ ಆಕ್ಷನ್‌ನ್ನು ತೆಗೆದುಕೊಳ್ಳುವುದಕ್ಕೆ ನಾವೇನೂ ಹೋಗಿಲ್ಲ. ಇದು ವಾಸ್ತವ ವಿಚಾರ. ಇನ್ನು ಇದು ಲೋಕಸೇವಾ ಆಯೋಗಕ್ಕೆ ಅವಮಾನ ಎಂದು ಹೇಳಿದ್ದೀರಿ. ಹಿಂದೆ ತಾವು ಸಂದರ್ಶನದಲ್ಲಿ ನಿಲ್ಲಿಸಿದ್ದ ಸಂದರ್ಭದ ಬಗ್ಗೆ ನಾನು ಕೇಳುತ್ತೇನೆ. ಡಿಪಾರ್ಟ್‌ಮೆಂಟಲ್ ರಿಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ನಮ್ಮ ಪಕ್ಷದವರೂ ಇದ್ದರು, ನಿಮ್ಮ ಪಕ್ಷದವರೂ ಇದ್ದರು, ಅದೇ ರೀತಿ ಬೇರೆ ಪಕ್ಷದವರೂ ಇದ್ದರು. Were they not the Hon'ble Members of the Departmental Recruitment Committes ? ಹಾಗಾದರೆ ಸ್ಯಾಚುಟರಿ ಬಾಡಿ ಎಂದ ತಕ್ಷಣ.....

ಶ್ರೀ ಡಿ.ಬಿ. ಚಂದ್ರೇಗೌಡ : ನಮ್ಮ ಪಾಯಿಂಟ್ ಅನ್ನು ನೀವು ಮೀಟ್ ಮಾಡುತ್ತಿಲ್ಲ. ನೀವು ವಿತ್‌ಡ್ರಾ ಮಾಡಿದ್ದಕ್ಕೆ ಕಾರಣಗಳು ಇರಬಹುದು. ಆದರೆ ನೀವು ಪಬ್ಲಿಕ್ ಸರ್ವೀಸ್ ಕಮೀಷನ್‌ನ ಮೇಲ ಟಾರ್ಜ್ ಮಾಡಿದ್ದೀರಿ. ಅದನ್ನು ಇಲ್ಲಿ ನಾವು ವಿಷದೀಕರಿಸಿದ್ದೇವೆ. ಇದು ನಮ್ಮ ಪಾಯಿಂಟ್.

ಶ್ರೀ ಎಸ್. ಬಂಗಾರಪ್ಪ : ನಾನು ಮುಗಿಸಿದ ಮೇಲೆ ನೀವು ಮಾತನಾಡಿ. ಇಲ್ಲಿ ಅಪಮಾನ ಮಾಡಿದ್ದೀರಿ ಎನ್ನತಕ್ಕ ವಿಚಾರವನ್ನು ತಾವು ಪ್ರಸ್ತಾಪ ಮಾಡುವುದಕ್ಕೆ ಹೋದರೆ ಐ ಆ್ಯಮ್ ಸಾರಿ.....

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ನನ್ನನ್ನು ನಾನೇ ರಕ್ಷಣೆ ಮಾಡಿಕೊಳ್ಳುತ್ತಿದ್ದೇನೆ. ಇಂಥ ಚರ್ಚೆಗಳು ಇಲ್ಲಿ ಬಹಳ ದಿವಸಗಳಿಂದ ನಡೆಯುತ್ತಿವೆ. ನಿಮ್ಮ ಕಾಲದಲ್ಲಿ ಮಾಡಿದ್ದೀರಿ, ಆದುದರಿಂದ ನಮ್ಮ ಕಾಲದಲ್ಲೂ ಮಾಡಿದ್ದೇವೆ. ಎಂದು ಹೇಳುತ್ತೀರಿ. ಆದರೆ ನಾನು ಎರಡೂ ಕಾಲಕ್ಕೆ ಸೇರಿದವನಲ್ಲ. ಆದುದರಿಂದ ಈ ನಮೂನೆಯ ಚರ್ಚೆಗಳನ್ನು ಇನ್ನಾದರೂ ಈ ಅಸೆಂಬ್ಲಿಯಲ್ಲಿ ನಿಲ್ಲಿಸಬೇಕು. ನಿಮ್ಮ ಕಾಲದಲ್ಲಿ ಎನ್ನುವುದಕ್ಕೆ ಬದಲಾಗಿ ಜನತಾದಳದ ಕಾಲದಲ್ಲಿ ಎಂದಾದರೂ ಹೇಳಿ.

ಅಧ್ಯಕ್ಷರು : ನಿಮ್ಮ ಕಾಲದಲ್ಲಿ ಎಂದು ಹೇಳಿದರೆ ಅದು ನನಗೂ ಅನ್ವಯಿಸಿಬಿಡುತ್ತದೆ. Better to be more specific.

ಶ್ರೀ ಎಸ್. ಬಂಗಾರಪ್ಪ : ಹಾಗಾದರೆ ನಿಮ್ಮಮ್ಮನ ಕಾಲಾತೀತ ಎಂದು ಭಾವಿಸೋಣವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಸಮಯದಲ್ಲಿ ನೀವು ಇಲ್ಲಿ ಕುಳಿತಿದ್ದರೆ ಇದನ್ನು ನೀವು ಸಹಿಸುತ್ತಿರಲಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಕೆ.ಪಿ.ಎಸ್.ಸಿಯ ಓರಲ್ ಇಂಟರ್‌ವ್ಯೂ ಅನ್ನು ನೀವು ರದ್ದು ಬೇಕಾದರೆ ಮಾಡಿ. ಭ್ರಷ್ಟಾಚಾರ ಆಪಾದನೆಗಳು ಹಲವಾರು ಜನರಿಂದ ಬಂದಿರಬಹುದು; ಅದರ ಬಗ್ಗೆ ನನ್ನದು ಅಡ್ಡಿ ಇಲ್ಲ. ಆದರೆ ಈ ಮೋಡ್ ಆಫ್ ಸೆಲೆಕ್ಷನ್ ಏನಿದೆ ಇದನ್ನು ಬದಲಾವಣೆ ಮಡಿದರೆ ಭ್ರಷ್ಟಾಚಾರ ಆಗುವುದಿಲ್ಲ. ನಾನು ಹೇಳುವುದೇನೆಂದರೆ, ಈಗ ಓರಲ್ ಇಂಟರ್‌ವ್ಯೂ ಬೇಡ. ಮುಖ್ಯೋಪಾಧ್ಯಾಯರ ಸಂದರ್ಶ ನಡೆದಿದೆ. ಅವರು ಬಿ.ಎ, ಬಿ.ಎಡ್ ಮಾಡಿಕೊಂಡಿದ್ದಾರೆ. ಅವರ ಬಿ.ಎ. ಮಾರ್ಕ್ಸ್ ಇದೆ, ಬಿ.ಎಡ್ ಮಾರ್ಕ್ಸ್ ಇದೆ; ಮತ್ತು ರಿಟನ್ಸ್ ಪರೀಕ್ಷೆ 1050 ಮಾರ್ಕ್ಸ್‌ಗೆ

ನಡೆದಿದೆ. ಕೆಪಿಎಸ್‌ಸಿಯವರು ಇದನ್ನು ಮಾಡಿದ್ದಾರೆ. ಅದರ ಆಧಾರದ ಮೇಲೆ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಮತ್ತು ವ್ಯವಸಾಯದ ಮಕ್ಕಳಿಗೆ 15 ಕೃಪಾಂಕ ಕೊಟ್ಟು ಸೆಲೆಕ್ಷನ್ ಮಾಡಿ. ರೀಜನಲ್ ಬ್ಯಾಲೆನ್ಸ್ ಮಾಡಲಿಕ್ಕೆ ಯಾವ ರೀತಿ ಅನುಕೂಲವಿದೆಯೋ ಅದನ್ನು ಮಾಡಿ. ಓರಲ್ ಇಂಟರ್‌ವ್ಯೂ ಅನ್ನು ಕ್ಯಾನ್ಸಲ್ ಮಾಡಿದರೆ ಎಲ್ಲರಿಗೂ ನ್ಯಾಯ ಸಿಗುತ್ತದೆ. ಭ್ರಷ್ಟಾಚಾರ ಕೂಡ ಕಡಿಮೆಯಾಗುತ್ತದೆ ಇದರ ಬಗ್ಗೆ ದಯವಿಟ್ಟು ವಿಚಾರಣೆ ಮಾಡಿ. ಇದನ್ನು ಮುಂದುವರಿಸಿ. ಈಗ 500 ಮುಖ್ಯೋಪಾಧ್ಯಾಯರ ಅವಶ್ಯಕತೆ ಬಹಳ ಇದೆ ಹೈಸ್ಕೂಲಿನಲ್ಲಿ ಒಬ್ಬ ಮುಖ್ಯೋಪಾಧ್ಯಾಯರೂ ಇಲ್ಲ. ಇದರಿಂದ ಬಹಳ ಅನ್ಯಾಯವಾಗಿದೆ, ಇದನ್ನು ತಾವು ವಿಚಾರ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ : ಅದೂ ಕೂಡ ಒಂದು ಸಲಹೆ. ಗ್ರಾಮೀಣ ಪ್ರದೇಶದಿಂದ ಬರತಕ್ಕಂತಹವರಿಗೆ 15 ಮಾರ್ಕ್ಸ್ ಕೊಡತಕ್ಕಂತಹ ತೀರ್ಮಾನ ಮಾಡಿದ್ದೇವೆ. ಅದನ್ನು ತಾವೆಲ್ಲಾ ಸ್ವಾಗತ ಮಾಡಿದ್ದೀರಿ. ಮಾನ್ಯ ರೆಡ್ಡಿಯವರು ಹೇಳಿದ ಹಾಗೆ ಈ ಮಾರ್ಕ್ಸ್ ಅನ್ನು ತೆಗೆದುಕೊಂಡು ನಾವು ಪ್ಯೆಮರಿ ಟೀಚರ್ಸ್ ಆಯ್ಕೆ ಮಾಡಿದ್ದೇನೆ. ಅದರ ಬಗ್ಗೆ ನಿಮ್ಮ ಜ್ಞಾನದಲ್ಲಿ ಇದೆ. ನಿಮ್ಮ ತಿಳುವಳಿಕೆಯಲ್ಲಿ ಕೂಡ ಇದೆ ಎಂದು ನಾನು ಭಾವಿಸಿದ್ದೇನೆ. ಅದೇ ರೀತಿಯಲ್ಲಿ ಮಾಡಿಕೊಟ್ಟಿದ್ದೇವೆ. We are also not actually interested in that. ನಾವು ಇಲ್ಲವೆಂದು ಹೇಳುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಬಹುಮತ ಹೇಗೂ ಇದೆ ಈ ಲೋಕಸೇವಾ ಆಯೋಗ ಬೇಡವೆಂದು ನಿರ್ಣಯವನ್ನಾದರೂ ಮಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಕಾಲದಲ್ಲಿ ಇವರ ಕಾಲದಲ್ಲಿ ಏನೇನು ನಡೆಯಿತು ಎನ್ನುವುದನ್ನು ಹೇಳಿ. ಅದು ನಮ್ಮ ಗಮನಕ್ಕೂ ಬರಲಿ. ನಮಗೆ ಗೊತ್ತಿಲ್ಲ. ಯಾವ ವಿಚಾರ ಏನಾಗಿದೆ ಎಂದು ನಮ್ಮ ಗಮನಕ್ಕೂ ಬರಲಿ. ನಿಮ್ಮ ಕಾಲದಲ್ಲಿ ಏನು ನಡೆದಿದೆ....

ಶ್ರೀ ಎಸ್. ಬಂಗಾರಪ್ಪ : ನಾನು ಹೇಳಬೇಕಾದರೆ ತಾವು ಬೇರೆ ಕಡೆಗೆ ಹೋಗಿ ಮಾತನಾಡುತ್ತಾ ಕುಳಿತಿದ್ದಿರಿ. ತಾವು ಕೇಳಲಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಎಲ್ಲರೂ ಸುಮ್ಮನಿದ್ದರು ನೀವೊಬ್ಬರೇ ಏಕೆ ಹೇಳಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಚಂದ್ರೇಗೌಡರ ಕಡೆ ತಿರುಗಿ ನಿಮ್ಮ ಕಾಲದಲ್ಲಿ ನಡೆಯಿತೆಂದು ಹೇಳಿದಿರಿ. ನಿಮ್ಮ ಕಾಲ ಯಾವುದು ಎಂಬುದು ನಿರ್ಧಾರವಾಗಬೇಕಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : ನನಗೆ ತೋರಿಸುತ್ತಿದ್ದೀರಲ್ಲಾ, ನನ್ನ ಕಾಲ ಯಾವುದೆಂದು ನೀವೇ ಹೇಳಿದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಚಂದ್ರೇಗೌಡರ ಕಾಲ ಯಾವುದೆಂದು ನಿರ್ಧಾರವಾಗಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ನಿಮ್ಮ ಕಾಲವೆಂದರೆ ನಿಮ್ಮ ಪಕ್ಷದ ಸರಕಾರ ಇದ್ದ ಕಾಲ ಎಂದು ತಾವು ಅರ್ಥ ಮಾಡಿಕೊಳ್ಳಬೇಕು. ಚಂದ್ರೇಗೌಡರ ಬಗ್ಗೆ ವೈಯಕ್ತಿಕವಾಗಿ ನಾನು ಎಂದೂ ಹೇಳುವುದಿಲ್ಲ. It is not my intention at all. ಪಬ್ಲಿಕ್ ಸರ್ವೀಸ್ ಕಮಿಷನ್ ವಿಚಾರದಲ್ಲಿ ನಾನು ಹೇಳತಕ್ಕಂಥಾದ್ದೇನೆಂದರೆ, ಒಂದೂಂದು ಸಾರಿ ಪರ, ವಿರೋಧವಾಗಿ ನಾವು ಎಷ್ಟೋ ಸಾರಿ ಚರ್ಚೆ ಮಾಡಿದ್ದೇವೆ. ಎಷ್ಟು ಸಲ ಇದರ ಬಗ್ಗೆ ಇದೇ ರೀತಿಯ ಆಪಾದನೆ ಬಂದಿದೆ ಎಂಬುದನ್ನು ತಾವು ರೆಕಾರ್ಡ್ ತೆಗೆಸಿ ನೋಡಿದರೆ ಗೊತ್ತಾಗುತ್ತದೆ. ಎರಡೂ ಕಡೆಯಿಂದ ವಿಚಾರಗಳು ಬಂದಿವೆ. ಅದೇ ರೀತಿ ಇಲಾಖೆಯ ರೆಕ್ರೂಟ್‌ಮೆಂಟ್ ಬಗ್ಗೆ ಕೂಡ ಬಂದಿದೆ. How to strike it and how to bring it to an order ಎಂಬ ವಿಚಾರ ನಿಜವಾಗಲೂ ಯೋಜನೆ ಮಾಡತಕ್ಕಂತಹ ವಿಚಾರವಾಗಿದೆ. ಮಾನ್ಯ ರೆಡ್ಡಿಯವರು ಏನಾದರೂ ಮಾಡಿ ಇದಕ್ಕೆ ಅಂತಿಮ ತೆರೆ ಎಳೆಯಬೇಕೆಂದು ಹೇಳುತ್ತಿದ್ದಾರೆ. ಈ ಸದನದಲ್ಲಿ ಏನು ಮಾಡಬೇಕೆಂಬ ಬಗ್ಗೆ ತಾವು ಸಲಹೆ ಕೊಟ್ಟರೆ, ಆ ರೀತಿ ಹೇಳಿದರೆ ಅದರ ಬಗ್ಗೆ

ನಮ್ಮದೇನೂ ಅಭ್ಯಂತರ ಇಲ್ಲ. ಆದೂ ಕೂಡ ಒಂದು ಸಲಹೆಯಾಗಿದೆ. ಒಂದು ರೀತಿಯ ಸಲಹೆಗಳು ಬಂದರೆ ಅವನ್ನು ವಿಚಾರ ಮಾಡಿ ಜಾರಿ ಮಾಡಬೇಕಾಗುತ್ತದೆ. That is why in the matter of selection of the primary school teacher, we did follow that procedure. ನಾವು ಅದನ್ನು ಮಾಡಿದೆವು. ಆಪಾದನೆ ಯಾವುದೂ ಕೂಡ ನಮಗೆ ಬರಲಿಲ್ಲ. ಆದರೆ ಬೇರೆಯವರದ್ದು ಮಾಡಿದಾಗ ಬಂತು ಎನ್ನತಕ್ಕಂತಹ ವಿಚಾರ ಹೇಳಿದರು. ಆದರೂ ಕೂಡ ಗ್ರಾಮೀಣ ಪ್ರದೇಶದ ಒಬ್ಬ ಹುಡುಗರೂ ಆಯ್ಕೆ ಆಗಲಿಲ್ಲ. ಅದು ಬೇರೆ ಕಂಪ್ಲೇಂಟ್ ಬಂದಿದೆ. of here are all line matters for and aagainst ಹೀಗೆಲ್ಲಾ ಬಂದಿರತಕ್ಕ ವಿಚಾರ ಇಷ್ಟು ವಿಚಾರಗಳನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಸರ್ಕಾರದವರು ಈ ರೀತಿಯಾಗಿ ತೀರ್ಮಾನ ಮಾಡತಕ್ಕಂಥ ಸಂದರ್ಭ ಏತಕ್ಕೆ ಬಂದಿತು ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಅದು ಬಿಟ್ಟು ಬೇರೆ ಇನ್ನು ಯಾವುದೂ ಕೂಡ ಕಾರಣವಿಲ್ಲ. ಆ ಬಾಡಿ ಏನು ಇದೆ, ಅದು ಡಾಜ್ಯಾಂಗದ ಪ್ರಕಾರವಾಗಿ ಹುಟ್ಟಿ ಬಂದಿರತಕ್ಕಂಥದ್ದು. ಪಿ.ಎಸ್.ಸಿ. ಬಗ್ಗೆ ಗೌರವ ಕಡಿಮೆ ಇದೆ ಎಂದಲ್ಲಾ ಆನರಬಲ್ಸ್ ಪಿ.ಎಸ್.ಐ. ಮೆಂಬರ್ಸ್ ಬಗ್ಗೆ ಕಡಿಮೆ ಇದೆ ಎಂಬ ಪ್ರಶ್ನೆಯಲ್ಲ. ಆದರೆ ಕೆಲವೊಮ್ಮೆ ಸರ್ಕಾರದವರು ಅದನ್ನು ವಿಚಾರ ಮಾಡಿದಾಗ, ನ್ಯಾಯ ಮತ್ತೊಂದು ರೀತಿಯಲ್ಲಿ ಸಿಕ್ಕಬೇಕೆನ್ನತಕ್ಕಂಥ ಒಂದು ವಿಚಾರ ಸರ್ಕಾರದ ಗಮನಕ್ಕೆ ಬಂದಾಗ ಆ ರೀತಿಯ ಒಂದು ಕಾರ್ಯಕ್ರಮವನ್ನು ಹಾಕತಕ್ಕಂಥ ವಿಚಾರವನ್ನು ಬಿಟ್ಟರೆ ಅದರಲ್ಲಿ ಬೇರೆ ಏನೂ ಉದ್ದೇಶ ಇಲ್ಲವೆನ್ನತಕ್ಕಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ನಾನು ಹೇಳುತ್ತಾ, ಇದರಲ್ಲಿ ತಾವು ಯಾರೋ ಹೇಳಿದಿರಿ ತಪ್ಪಾಗಿದೆ, ಅಪಾಲಜೈಸ್ ಮಾಡಬೇಕು ಎಂದು. ನಾನು ಹೇಳುತ್ತೇನೆ ಇವತ್ತು ಏನಾದರೂ ತಪ್ಪಾಗಿದ್ದರೆ ಅಪಾಲಜೈಸ್ ಮಾಡತಕ್ಕಂಥದ್ದು ಎಲ್ಲ ಕ್ಕಿಂತಲೂ ಹೆಚ್ಚಾಗಿ ಜನಸಾಮಾನ್ಯರು ಅಲ್ಲಿದ್ದಾರೆ. ಇವತ್ತು ಆ ವರ್ಗಕ್ಕೆ ಅನ್ಯಾಯ ಮಾಡಿದ್ದರೆ ಅಲ್ಲಿ ಅಪಾಲಜಿ ಕೇಳತಕ್ಕಂಥದ್ದು ಆಲ್ಲಿಂದ ಪ್ರಾರಂಭವಾಗಬೇಕೇ ವಿನಃ ಬೇರೆ ಎಲ್ಲಲ್ಲೋ ಮಾಡುವುದಿಲ್ಲ. ನಾನು ಹೇಳುತ್ತೇನೆ. Let us not try to put the cart before the Horse. Let us try to apologise to the people first. ಯಾರೋ ಬಿಡಮಕ್ಕಳು ಹಳ್ಳಿಗಾಡಿನಿಂದ ಬರತಕ್ಕಂಥವನು ಸೆಲಕ್ಷನ್ ಆಗುತ್ತಿಲ್ಲ ಎನ್ನತಕ್ಕ ಮಾತು ಇದೆ. ಅವನಿಗೆ ನ್ಯಾಯ ದೊರಕಿದ್ದರೆ, ನಾವು ಅಪಾಲಜಿ ಕೇಳತಕ್ಕದು, ಸರಿ. ಅದು ಅಲ್ಲಿಂದ ಪ್ರಾರಂಭವಾಗಬೇಕೆನ್ನತಕ್ಕಂಥದ್ದು ಇದೆ.

ಶ್ರೀ ಸಿ. ಬೈರೇಗೌಡ : ಆ ರೀತಿಯಾದ ಕಾನೂನನ್ನು ತಂದರೆ ನಾವು ಅದನ್ನು ಒಪ್ಪುವುದು ಬಿಡುವುದನ್ನು ಆಲೋಚನೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ : ನಾನು ಆದಕ್ಕೆ ಹೇಳುತ್ತಿದ್ದೇನೆ, ಅದಕ್ಕೆ ಸಲಹೆ ಕೊಡಿ. ಯಾವ ರೀತಿ ಮಾಡಬೇಕೆನ್ನುವುದಕ್ಕೆ ಸಲಹೆ ಕೊಡಿ. You have got all those rights and powers to offer suggestions. Please give them. The Government will try to consider them. Why should you hesitate to giv e all those suggestions.

ಶ್ರೀ ಬಿ.ಎ.ಎಸ್. ಯಡಿಯೂರಪ್ಪ : ರೋಸ್ಟರ್, ಮೆರಿಟ್ ಆಧಾರದ ಮೇಲೆ ಯಾವುದೇ ಒಂದು ಸಂದರ್ಶನ ಸಮಿತಿ ಇಲ್ಲ. ಅದರ ಆಧಾರದ ಮೇಲೆ ಗ್ರಾಮಾಂತರ ಪ್ರದೇಶಕ್ಕೆ ಆದ್ಯತೆಯನ್ನು ಕೊಡುತ್ತೇವೆ, ಅದಕ್ಕೆ ಇಷ್ಟು ನಂಬರ್ ಕೊಡುತ್ತೇವೆನ್ನುವ ತೀರ್ಮಾನ ತಗೆದುಕೊಂಡು ಕೆ.ಪಿ.ಎಸ್.ಸಿ.ಯನ್ನು ವಾಪಸ್ ಪಡೆಯುತ್ತೇವೆಂದರೆ, ಅದನ್ನು ಮಾಡಿ. ತಾವು ಮುಂದೆ ಏನು ಮಾಡಬೇಕೆನ್ನುವುದಕ್ಕೆ ಸ್ಪಷ್ಟವಾಗಿ ಏನೂ ಇಲ್ಲ. ನಿಶ್ಚಿತವಾಗಿ ಅದನ್ನು ಮಾಡದಿರುವುದರಿಂದ ಭ್ರಷ್ಟಾಚಾರ ನಡೆಯುತ್ತಿದೆ. ಭ್ರಷ್ಟಾಚಾರ ನಡೆಯುತ್ತಿರುವುದು ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಆದ್ದರಿಂದ ಇನ್ನು ಮುಂದೆ ಮೆರಿಟ್ ರೋಸ್ಟರ್ ಪದ್ಧತಿಯ ಮೇಲೆ ಗ್ರಾಮಾಂತರ ಪ್ರದೇಶಕ್ಕೆ ಇಷ್ಟು ನಂಬರ್ ಎಂದು ಕೊಟ್ಟು ಆಯ್ಕೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿ. ಆದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ತಾವು ಸಲಹೆಯನ್ನು ಕೊಡಿ ಎಂದು ಹೇಳುತ್ತಿದ್ದೀರಿ. ಗ್ರಾಮಾಂತರ ಪ್ರದೇಶದಲ್ಲಿ ಶೇಕಡ 70ರಿಂದ 75ರಷ್ಟು ಜನರು ವಾಸ ಮಾಡುತ್ತಿದ್ದಾರೆ. ರೋಸ್ಟರ್ ಪ್ರಕಾರ ಇಷ್ಟು

ಪರ್ಸಂಟೇಜ್ ಗ್ರಾಮಾಂತರ ಪ್ರದೇಶದಿಂದ ಬರತಕ್ಕಂಥ ಜನರಿಗೆ ರಿಸರ್ವೇಷನ್ ಮಾಡಿ ಇಟ್ಟುಬಿಡಿ. ಎಲ್ಲಾ ವರ್ಗದವರಿಗೂ ಕೂಡ ರೋಸ್ಟರ್ ಪ್ರಕಾರ ಗ್ರಾಮಾಂತರ ಪ್ರದೇಶದಿಂದ ದಾಮಾಶ ಪ್ರಕಾರ ಬರತಕ್ಕಂಥ ಜನಸಂಖ್ಯೆ ಎಷ್ಟಿದೆ, ಆ ದಾಮಾಶ ಪ್ರಕಾರ ರಿಸರ್ವೇಷನ್ ಮಾಡಿ ಆ ಜನರಿಗೆ ಕೊಟ್ಟು ಉಳಿಯತಕ್ಕಂಥದ್ದನ್ನು ನಗರ ಪ್ರದೇಶಗಳಲ್ಲಿರುವವರಿಗೆ ಕೊಡಿ. ಇದು ಬಹಳ ಸರಳವಾಗಿರತಕ್ಕಂಥ, ಸುಲಭವಾಗಿರತಕ್ಕಂಥ ಕ್ರಮ. ಗ್ರಾಮಾಂತರ ಪ್ರದೇಶಗಳಲ್ಲಿ 150–200 ಜನ ಮಕ್ಕಳು ಕುಳಿತಿರತಕ್ಕಂಥ ಶಾಲೆಗಳಲ್ಲಿ ಒಬ್ಬ ಮಾಸ್ಟರ್ ಕೂಡ ಇರುವುದಿಲ್ಲ. ಅಂಥ ಕಡೆಯಿಂದ ಬಂದ ಮಕ್ಕಳಿಗೆ ಇಷ್ಟಿನ ದಿವಸ ಇಲ್ಲಿ ಸೋಫಿಯಾ ಕಾನ್‌ವೆಂಟ್‌ನಿಂದಲೋ ಇನ್ನೆಲ್ಲಿಂದಲೋ ಬಂದಿರತಕ್ಕಂಥ ವಿದ್ಯಾರ್ಥಿಗಳ ಜೊತೆಗೆ ಹೋಲಿಸುವುದು ಸರಿಯಾದ ಕ್ರಮವಲ್ಲ. ಕತ್ತೆಯನ್ನು ಒಂದೇ ಕಡೆ ಕಟ್ಟುಬಿಟ್ಟು ಕುದುರೆಯನ್ನು ಒಂದೇ ಕಡೆ ಕಟ್ಟಿ ಓಡಿಸಿ ಎಂದು ಹೇಳಿದರೆ ಎಲ್ಲಿ ಸಾಧ್ಯವಾಗುತ್ತದೆ ? ಆದ್ದರಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥದ್ದು ಏನೆಂದರೆ ಹಳ್ಳಿಗಳಲ್ಲಿ ಮತ್ತು ನಗರಗಳಲ್ಲಿ ದಾಮಾಷ ಜನಸಂಖ್ಯೆ ಏನಿದೆ ಆ ಜನಸಂಖ್ಯೆಯ ಆಧಾರದ ಮೇಲೆ ತಾವು ರಿಜರ್ವೇಷನ್ ಇಟ್ಟುಬಿಡಿ. ರೋಸ್ಟರ್‌ನ್ನು ಅಲ್ಲಿ ಫಾಲೋ ಮಾಡಿ. ಸರಳವಾದ ವಿಧಾನ ಇದಾಗುತ್ತದೆ. ಇದನ್ನು ದಯವಿಟ್ಟು ಜಾರಿಗೆ ತರುತ್ತೆನ್ನುವ ಮಾತನ್ನು ತಾವು ಹೇಳಬೇಕು.

(ಗೊಂದಲ)

ಶ್ರೀ ಪಾಟೂಳ್ ನಾಗರಾಜ್ : ನಾನು ನಮ್ಮ ಹುಡುಗರನ್ನು ಕತ್ತೆ ಕುದುರೆ ಮಟ್ಟಕ್ಕೆ ತಳ್ಳಲಿಕ್ಕೆ ತಯಾರಾಗಿಲ್ಲ. ಕತ್ತೆ ಯಾರು, ಕುದುರೆ ಯಾರು, ಏನು ಈ ರೀತಿ ಶುರು ಮಾಡಿಬಿಟ್ಟರೆ ಬಹಳ ಕಷ್ಟವಾಗುತ್ತದೆ. ಯಾರು ಕತ್ತೆ, ಯಾರು ಕುದುರೆ?

ಶ್ರೀ ಬಸವರಾಜ ರಾಯರೆಡ್ಡಿ : ನಗರ ಪ್ರದೇಶದಲ್ಲಿರುವವರು ಕುದುರೆ ಇರಬಹುದು ಅವರ ಪ್ರಕಾರ. ಮಾನ್ಯ ಅಧ್ಯಕ್ಷರೇ, ದಯವಿಟ್ಟು ಅದನ್ನು ಕಡತದಿಂದ ತೆಗೆಸಿದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಇಷ್ಟೇನೇ. ಈ ವಿಚಾರದಲ್ಲಿ, ರೀಜಿನಲ್ ಇಂಬ್ಯಾಲೆನ್ಸ್ ವಿಚಾರದಲ್ಲಿ ಕೂಡ ಮಾನ್ಯ ಕಮರುಲ್ ಇಸ್ಲಾಂರವರು ಕೂಡ ಪ್ರಸ್ತಾಪ ಮಾಡಿದ್ದಾರೆ. ತಾವೂ ಕೂಡ ಅದೇ ಮಾತನ್ನು ಉಪಯೋಗಿಸಿ ಗ್ರಾಮೀಣ ಜನರ ಬಗ್ಗೆ ತಾವು ಮಾತನಾಡಿದ್ದೀರಿ. ಅದರಲ್ಲೂ ಮೋರ್ ಬ್ಯಾಕವರ್ಡ್ ಹೈದರಾಬಾದ್ ಕರ್ನಾಟಕ ಏರಿಯಾ ಏನಿದೆ ಅದಕ್ಕೆ ಕೊಡಬೇಕಾದಂಥ ವಿಚಾರ, ಈಗ ಉದಾಹರಣೆಗೆ ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್‌ಗೆ ನೇಮಕ ಮಾಡುವ ಕಾಲಕ್ಕೆ ನಾವು ಎಷ್ಟೋ ಸಲ ಹೇಳಿದ್ದೇವೆ. ತಮಗೂ ಗೊತ್ತಿದೆ. ನಾವು ಈ ಏರಿಯಾ ಮಕ್ಕಳುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಮಾಡುತ್ತೇವೆನ್ನತಕ್ಕಂಥ ವಿಚಾರವನ್ನು ನಾವು ಹೇಳಿದ್ದೇವು. ಇದಕ್ಕೆ ನಾವು ಇಂಟರ್‌ವ್ಯೂ ಅನ್ನು ಹಾಕಿಬಿಟ್ಟರೆ, constitutional position ತಮಗೆಲ್ಲಾ ಗೊತ್ತಿದ You will have to invite applications from all the areas. You cannot restrict it to a particular area. ಈ ರೀತಿ ನಾವು ಮಾಡಿದ ತಕ್ಷಣ ಹೈಕೋರ್ಟಿಗೆ ಹೋಗಿ ರಿಟ್ ಹಾಕುತ್ತಾರೆ. ಆದ್ದರಿಂದ ತಮ್ಮ ಗಮನಕ್ಕೆ ತರತಕ್ಕದ್ದು ಏನೆಂದರೆ, ಅದಕ್ಕೆ ಬೇರೆ ಪ್ರೊಸೀಜರ್ ಮಾಡಿ ಕಾಂಪ್ಯಾಕ್ಟ್ ಬೇಸಿಸ್ ಮತ್ತೊಂದು ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಜೊತೆಗೆ ತಮ್ಮ ಅಭಿಪ್ರಾಯವನ್ನು ಇಟ್ಟುಕೊಂಡು ಹೋಗುತ್ತಿದ್ದೇವೆ. ಹಾಗೆ ಮಾಡದಿದ್ದರೆ ಆ ಏರಿಯಾಕ್ಕೆ ಬೆಂಬಲ ಕೊಡುವುದಕ್ಕಾಗುವುದಿಲ್ಲವೆಂಬುದನ್ನು ತಿಳಿದುಕೊಂಡಿದ್ದೇವೆ. ಗ್ರಾಮಾಂತರ ಪ್ರದೇಶದ ಬಗ್ಗೆಯೂ ಹೇಳಿದ್ದೀರಿ. ಎಕ್ಸ್‌ಟ್ರಾ 15 ಪರ್ಸೆಂಟ್ ಅಂಕಗಳನ್ನು ಕೊಟ್ಟು ಹುದ್ದೆಗಳನ್ನು ತುಂಬಬೇಕೆಂದು ಹೇಳಿದ್ದೀರಿ. ಇಡೀ ಸದನ ಒಪ್ಪಿದೆ ಮತ್ತು ಜನರು ಮೆಚ್ಚಿದ್ದಾರೆ ಈ 15 ಪರ್ಸೆಂಟ್ ಮಾರ್ಕ್ಸ್ ಕೊಡುವುದಕ್ಕೆ. ಅಷ್ಟಾದರೂ ಕೂಡ ನ್ಯಾಯ ಸಿಗುವುದಿಲ್ಲವೆಂದು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. 50 ಅಂಕಗಳನ್ನು ತೆಗೆದುಕೊಂಡಿದ್ದವರಿಗೆ 15 ಅಂಕಗಳನ್ನು ಸೇರಿಸಿದರೆ ಅನೂಚಾನವಾಗುತ್ತದೆಂಬುದನ್ನು ಪಾಟೂಳ್ ನಾಗರಾಜ್ ಅವರು ಒಪ್ಪುತ್ತಾರೆಂದು ಭಾವನೆ. ಬೇಥವಯವರ ಜೊತೆ ಹೋಗಿ ನಿಲ್ಲುವುದಕ್ಕೆ ಆ ಮಕ್ಕಳಿಗೆ ಇಷ್ಟವಿಲ್ಲವೆಂಬ ಅಭಿಪ್ರಾಯ ಬರುತ್ತಿದೆ. ಅದಕ್ಕೆ ನಾನು ಹೇಳುವುದು, ದಯವಿಟ್ಟು ಸಲಹೆ ಕೊಡಿ, ಯಾವ ರೀತಿ ಮಾಡಬೇಕೆಂದು ಹೇಳಿ.

ಶ್ರೀ ಪಾಟೂಳ್ ನಾಗರಾಜ್ : ಸಲಹೆ ಮಾಡುವುದಕ್ಕೆ ಸದನದ ಸಮಿತಿ ಮಾಡಿ. ಸಭೆಯನ್ನು ನಾಳೆ ಮುಕ್ತಾಯ ಮಾಡುತ್ತಿದ್ದೀರಿ. ಈ ಸಂದರ್ಭದಲ್ಲಿ ಸಲಹೆ ಕೊಡಿ ಎಂದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ : ತಾವು ಕುಳಿತುಕೊಂಡರೆ ಹೇಳುತ್ತೇನೆ. ಸಲಹೆ ಕೊಡಿ ಎಂದರೆ ಸದನದಲ್ಲೇ ಕೊಡಿ ಎಂದು ಅಲ್ಲ. ಪತ್ರದ ಮೂಲಕ ಹೇಳುವುದಕ್ಕೆ ಬರುತ್ತದೆ, ಬಾಯಿ ಮೂಲಕ ಹೇಳುವುದಕ್ಕೆ ಬರುತ್ತದೆ. ಅದು ಬಿಟ್ಟು ನಾನು ಬೇರೆ ಇನ್ನೇನು ಹೇಳಲಿ?

ಶ್ರೀ ಪಾಟೂಳ್ ನಾಗರಾಜ್ : ಮುಖ್ಯಮಂತ್ರಿಗಳು ನನಗೆ ಸಿಕ್ಕಿ ಎರಡು ತಿಂಗಳಾಯಿತು. ನಾನು ಹೇಗೆ ಹೇಳಲಿ?

ಅಧ್ಯಕ್ಷರು : ಪ್ರೆಸ್ ಸ್ಟೇಟ್‌ಮೆಂಟ್ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ : ಅವಮಾನ ಮತ್ತೊಂದು ಪ್ರಶ್ನೆ ಅಲ್ಲ. ನಾನು ನಮ್ಮ ಮಕ್ಕಳ ಹಿತದೃಷ್ಟಿಯಿಂದ ಈ ತೀರ್ಮಾನ ಮಾಡಿದ್ದೇನೆ. ಅವಮಾನ ಎಂಬ ವಿಚಾರ ಅಲ್ಲ. ಇಲ್ಲಿ ಯಾರು ಹೇಳಿಕೆ ಮಾತೂ ಇಲ್ಲ. ಅವರ ಬಗ್ಗೆ ನಮಗೆ ಗೌರವ ಇದೆ. ಸರ್ಕಾರದ ಬಗ್ಗೆ ಅವರ ಕಡೆಯಿಂದ ಗೌರವ ಇಟ್ಟುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಒಬ್ಬರಿಗೊಬ್ಬರು ಗೌರವ ಕೊಟ್ಟುಕೊಂಡು ಹೋದರೆ ಒಳ್ಳೆಯದೆಂದು ಈ ವಿಚಾರದ ಬಗ್ಗೆ ಇಷ್ಟೇ ಹೇಳಿ ಇದಕ್ಕಿಂತ ಹೆಚ್ಚಿಗೆ ಏನೂ ಇಲ್ಲವೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗೆ ಉತ್ತರವನ್ನು ನೀಡಿದ್ದೇವೆ, ಲೋಕಸೇವಾ ಆಯೋಗದಿಂದ ಮುಖ್ಯೋಪಾಧ್ಯಾಯರ ನೇಮಕಾತಿ ಬಗ್ಗೆ ಇರತಕ್ಕ ಅಧಿಕಾರವನ್ನು ಪಾಪಸ್ಸು ಪಡೆದಿದ್ದಾರೆ ಅದು ಸರಿಯಲ್ಲ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳನ್ನು ಒತ್ತಾಯಿಸುವುದು ಏನೆಂದರೆ, ಈಗೇನು ಸಂದರ್ಶನ ನಡೆಯುತ್ತಿದೆ ಅದನ್ನು ಹಾಗೆಯೇ ಮುಂದುವರಿಸಿ ಅಯ್ಕೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಒಂದು ವೇಳೆ ನೀವು ನಿಜವಾಗಿ ಭ್ರಷ್ಟಾಚಾರ ನಡೆಯುತ್ತಿದ್ದ ಅದನ್ನು ಸರಿಪಡಿಸಿಬೇಕೆಂದು ಹೇಳುವುದಾದರೆ, ಮೆರಿಟ್ ಆಧಾರದ ಮೇಲೆ ರೋಸ್ಟರ್ ಸಿಸ್ಟಂ ಅನುಸರಿಸಿ ನೇಮಕಾತಿ ಮಾಡುವ ಹೊಸ ವ್ಯವಸ್ಥೆಯನ್ನು ಮಾಡಿದ್ದೇವೆಂದು ಘೋಷಣೆ ಮಾಡಬೇಕು. ಇಲ್ಲದಿದ್ದರೆ ತಾವು ಮಾಡಿರತಕ್ಕದ್ದು ರಾಜಕೀಯ ಷಡ್ಯಂತರ, ರಾಜಕೀಯಕ್ಕೋಸ್ಕರ ಕೆಲಸ ಮಾಡುತ್ತಿದ್ದೀರೆಂದು ಆರೋಪ ಮಾಡಬೇಕಾಗುತ್ತದೆ. ತಮ್ಮ ಬಂಧುಬಳಗದವರಿಗೆ ಹುದ್ದೆ ಕೊಡಬೇಕೆಂದು ಈ ರೀತಿ ಮಾಡುತ್ತಿದ್ದಾರೆಂದು ಆರೋಪಿಸಿ ಸರ್ಕಾರದ ಈ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಬಿಜೆಪಿಯ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಈಗ ಸಭೆ ಮುಂದುವರಿದು ಪುನಃ ಮಧ್ಯಾಹ್ನ 2.30ಕ್ಕೆ ಸೇರುತ್ತದೆ.

(ಸಭೆಯು ಪುನಃ ಮಧ್ಯಾಹ್ನ 3.00ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷೆಣಿ ಅವರು ಪೀಠವನ್ನಲಂಕರಿಸಿದ್ದರು)

* * *

ಶ್ರೀ ಸಿ. ಬೈರೇಗೌಡ : ಆಗಲೇ ಕುತೆಗಲ್ ವಿಚಾರ.....

ಉಪಾಧ್ಯಕ್ಷೆಣಿಯವರು : ಮುಖ್ಯಮಂತ್ರಿಗಳು ಬರಲಿ ಈಗ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುವುದು

ವಿಷಯ : ಕಂಪ್ಯೂಟರ್ ಕೊಂಡುಕೊಳ್ಳುವುದರಲ್ಲಿ ಅವ್ಯವಹಾರ

ಶ್ರೀ ಬಿ.ಎಸ್. ಯಡಿಯೂರಪ್ಪ : (ಶಿಕಾರಿಪುರ) ಕಂಪ್ಯೂಟರ್ ಅವ್ಯವಹಾರದ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ; ಮತ್ತು ಮಧ್ಯಾಹ್ನದ ಮೇಲೆ ಆ ವಿಚಾರವನ್ನು ತೆಗೆದುಕೊಳ್ಳುವುದರ ಬಗ್ಗೆಯೂ ಅರಿಕೆ ಮಾಡಿದ್ದೆ. ವಿಧಾನ ಪರಿಷತ್ತಿನಲ್ಲಿ ಈಗಾಗಲೇ ಈ ವಿಷಯ ಪ್ರಸ್ತಾಪವಾಗಿದೆ. ಕರ್ತವ್ಯ ದೃಷ್ಟಿಯಿಂದ ಇಲ್ಲಿಯೂ ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಸುಮಾರು 5 ಕೋಟಿ 27 ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟ ವ್ಯವಹಾರ ಅದು. ಆಗತ್ಯವಿಲ್ಲದ ಕಂಪ್ಯೂಟರ್‌ಗೆ ಆರ್ಡರ್ ಕೊಟ್ಟು 3 ಕೋಟಿ ರೂಪಾಯಿ ದುರುಪಯೋಗವಾಗಿದೆ. ಆರ್ಡರ್ ಕೊಟ್ಟ ದಿವಸವೇ ಅಡ್ವಾನ್ಸ್ ಕೊಟ್ಟಿದ್ದಾರೆ.